ಸಂಪುಟ 01 | ಸಂಚಿಕೆ 204 | ಶನಿವಾರ 20 ಜೂನ್ 2026 | ಪುಟ 4 | ಬೆಲೆ–2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE
ಸತ್ಯದ ದಿಕ್ಕು TRUE PATH
ಕನ್ನಡ ದಿನ ಪತ್ರಿಕೆ
ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ
REGIONAL KANNADA DAILY MORNING
RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಅಂತರರಾಷ್ಟ್ರೀಯ ತಂದೆಯ ದಿನ**
ಭಾರತ, ಅಮೆರಿಕ, ಯುಕೆ ಮತ್ತು ಯುಎಇ ಸೇರಿದಂತೆ 111 ಕ್ಕೂ ಹೆಚ್ಚು ದೇಶಗಳಲ್ಲಿ ಅಂತರರಾಷ್ಟ್ರೀಯ ತಂದೆಯ ದಿನವನ್ನು ವಾರ್ಷಿಕವಾಗಿ ಜೂನ್ ತಿಂಗಳ ಮೂರನೇ ಭಾನುವಾರದಂದು ಆಚರಿಸಲಾಗುತ್ತದೆ. ದಿನಾಂಕವು ನಿಗದಿತ ಕ್ಯಾಲೆಂಡರ್ ದಿನಾಂಕಕ್ಕಿಂತ ವಾರದ ನಿರ್ದಿಷ್ಟ ದಿನಕ್ಕೆ ಸಂಬಂಧಿಸಿರುವುದರಿಂದ, ಅದು ಪ್ರತಿ ವರ್ಷ ಬದಲಾಗುತ್ತದೆ.

**2) ಅಂತರರಾಷ್ಟ್ರೀಯ ಯೋಗ ದಿನ:** ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ಯೋಗದ ಮಹತ್ವವನ್ನು ಸಾರಲು, 2015 ರಿಂದ ಪ್ರತಿ ವರ್ಷ ಈ ದಿನವನ್ನು ಜಾಗತಿಕವಾಗಿ ಆಚರಿಸಲಾಗುತ್ತದೆ. ಭಾರತದಲ್ಲಿ ಹುಟ್ಟಿದ ಈ ಪ್ರಾಚೀನ ಕಲೆಗೆ ವಿಶ್ವಸಂಸ್ಥೆ ಮಾನ್ಯತೆ ನೀಡಿದೆ.

**3) ವಿಶ್ವ ಸಂಗೀತ ದಿನ:** ಸಂಗೀತಗಾರರನ್ನು ಪ್ರೋತ್ಸಾಹಿಸಲು ಮತ್ತು ಸಂಗೀತದ ಮೂಲಕ ಜನರನ್ನು ಬೆಸೆಯಲು ಈ ದಿನವನ್ನು 'ಫೆಟೆ ಡೆ ಲಾ ಮ್ಯೂಸಿಕ್' (Fête de la Musique) ಹೆಸರಿನಲ್ಲಿ ಫ್ರಾನ್ಸ್‌ನಲ್ಲಿ ಆರಂಭಿಸಲಾಯಿತು, ಪ್ರಸ್ತುತ ಇದು ವಿಶ್ವದಾದ್ಯಂತ ಪ್ರಚಲಿತದಲ್ಲಿದೆ.

**4) ವರ್ಷದ ಅತಿ ಉದ್ದದ ಹಗಲು:** ಜೂನ್ 21 ರಂದು ಸೂರ್ಯನ ಕಿರಣಗಳು ಭೂಮಿಯ ಉತ್ತರ ಗೋಳಾರ್ಧದ ಮೇಲೆ ನೇರವಾಗಿ ಬೀಳುವುದರಿಂದ, ಇದು ವರ್ಷದ ಅತ್ಯಂತ ದೀರ್ಘವಾದ ಹಗಲು ಮತ್ತು ಅತಿ ಚಿಕ್ಕ ರಾತ್ರಿಯಾಗಿರುತ್ತದೆ. ಇದನ್ನು ಬೇಸಿಗೆಯ ಅಯನ ಸಂಕ್ರಾಂತಿ (Summer Solstice) ಎಂದು ಕರೆಯುತ್ತಾರೆ.

## ಸುಭಾಷಿತ

ಮನುಷ್ಯನಿಗೆ ನಿಜವಾದ ಜ್ಞಾನಪ್ರಾಪ್ತಿಯಾದರೆ ಅವನು ದೇವರನ್ನು ಎಲ್ಲೋ ದೂರದಲ್ಲಿ ಇರುವವನೆಂದು ಭಾವಿಸುವುದಿಲ್ಲ. ಅವನು ಅಂದಿನಿಂದ ದೂರದಲ್ಲಿರುವವನೆಂದು ಕಾಣಿಸುವುದಿಲ್ಲ. ಅವನು ಅಂತರಂಗದಲ್ಲಿರುವವನು ಎಂದು ಭಾಸವಾಗುವುದು. ಅವನು ಎಲ್ಲರ ಅಂತರಂಗದಲ್ಲೂ ಇರುವನು. ಅವನನ್ನು ಹುಡುಕುವವರೆಲ್ಲ ಅಲ್ಲಿ ಕಾಣುತ್ತಾರೆ.

ಶ್ರೀ ರಾಮಕೃಷ್ಣ ಪರಮಹಂಸರು

# ರಾಯಚೂರಿಗೆ 'ಏಮ್ಸ್' ಮಂಜೂರಾತಿಗೆ ಆಗ್ರಹ

## 1500ನೇ ದಿನದ ಹೋರಾಟಕ್ಕೆ ಸನ್‌ರೈಸ್ ಶಿಕ್ಷಣ ಸಂಸ್ಥೆ ಭರ್ಜರಿ ಬೆಂಬಲ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ರಾಯಚೂರು ಜಿಲ್ಲೆಯಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (ಏಮ್ಸ್) ಸ್ಥಾಪನೆಗೆ ಆಗ್ರಹಿಸಿ ಕಳೆದ 1500 ದಿನಗಳಿಂದ ನಿರಂತರವಾಗಿ ನಡೆಯುತ್ತಿರುವ ಐತಿಹಾಸಿಕ ಹೋರಾಟಕ್ಕೆ ಸಿಂಧನೂರಿನಲ್ಲಿ ಭಾರಿ ಬೆಂಬಲ ವ್ಯಕ್ತವಾಗಿದೆ. ಇಲ್ಲಿನ ಸನ್‌ರೈಸ್ ಶಿಕ್ಷಣ ಸಂಸ್ಥೆಗಳ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ಹಾಗೂ ಪ್ರಮುಖರು ಬೃಹತ್ ಕಾಲ್ನಡಿಗೆ ಜಾತ ನಡೆಸಿ, ಮಾನ್ಯ ತಹಶೀಲ್ದಾರರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಏಮ್ಸ್ ಸಿಗದಿದ್ದರೆ ಪ್ರತ್ಯೇಕ ರಾಜ್ಯದ ಕೂಗು': ಪೂಜ್ಯ ಶ್ರೀಗಳ ಎಚ್ಚರಿಕೆ ಜಾತದ ಬಳಿಕ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದ ಯದ್ದಲದೊಡ್ಡಿ ನೇಗಿಲಯೋಗಿ ಶ್ರೀಗಳು "ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗೆ ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆ ಅತ್ಯಗತ್ಯ. ಸರ್ಕಾರ ತಕ್ಷಣವೇ ಈ ಭಾಗದ ಜನರ ನ್ಯಾಯಯುತ ಬೇಡಿಕೆಯನ್ನು ಈಡೇ–ರಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ




ಇಲ್ಲಿ ಪ್ರತ್ಯೇಕ ರಾಜ್ಯದ ಕೂಗು ಹುಟ್ಟಿಕೊಳ್ಳುವ ಸಾಧ್ಯತೆಯಿದೆ," ಎಂದು ಎಚ್ಚರಿಸಿದರು.

ಮತ್ತೊಬ್ಬ ಧರ್ಮಗುರುಗಳಾದ ಪೂಜ್ಯ ಅಮೋಘಸಿದ್ದೇಶ್ವರ ತುರುವಿಹಾಳ ಮಾದಯ್ಯ ಗುರುಗಳು ಮಾತನಾಡಿ, ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗದ ಆರೋಗ್ಯ ಮತ್ತು ಶೈಕ್ಷಣಿಕ ಸುಧಾರಣೆಗೆ ಏಮ್ಸ್ ಅತ್ಯಂತ ಅವಶ್ಯಕವಾಗಿದೆ ಎಂದರು. ಐಐಟಿ ಕಳೆದುಕೊಂಡಿದ್ದೇವೆ, ಏಮ್ಸ್ ಬಿಡೆವು: ಕಂಬಳಿ ಏಮ್ಸ್ ತಾಲೂಕು ಹೋರಾಟ ಸಮಿತಿಯ ಪ್ರತಿನಿಧಿ ಡಿ ಎಸ್ ಕಂಬಳಿ ಮಾತನಾಡಿ, "2022ರ ಮೇ 13ರಿಂದ ನಿರಂತರವಾಗಿ ಆರಂಭವಾದ



ಹೋರಾಟಕ್ಕೆ ಇಂದು 1500 ದಿನಗಳು ಸಂದಿವೆ. ಈ ಹಿಂದೆ ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆಯಿಂದಾಗಿ ನಾವು ರಾಯಚೂರಿಗೆ ಬರಬೇಕಿದ್ದ ಐಐಟಿ (IIT) ಕಳೆದುಕೊಂಡಿದ್ದೇವೆ. ಆದರೆ, ನಮ್ಮ ಹಕ್ಕಾದ ಏಮ್ಸ್ ಅನ್ನು ಯಾವುದೇ ಕಾರಣಕ್ಕೂ ಬಿಟ್ಟುಕೊಡುವುದಿಲ್ಲ.

ರಾಯಚೂರು–ಯಾದಗಿರಿ ಭಾಗದ ಆರೋಗ್ಯದ ಸಂಜೀವಿನಿಯಾದ ಏಮ್ಸ್ ಅನ್ನು ಹೋರಾಟದ ಮೂಲಕವೇ ಪಡೆದುಕೊಳ್ಳುತ್ತೇವೆ," ಎಂದು ಸಂಕಲ್ಪ ತೊಟ್ಟರು. ಕಲ್ಯಾಣ ಕರ್ನಾಟಕದ ಆರೋಗ್ಯ ಸುಧಾರಣೆಗೆ ಏಮ್ಸ್ ದಿಕ್ಸೂಚಿ ಸನ್‌ರೈಸ್ ನರ್ಸಿಂಗ್ ಕಾಲೇಜಿನ






ಪ್ರಾಚಾರ್ಯರಾದ ಲಾಜರ್ ಸಿರಿಲ್ ಜಿ ಮಾತನಾಡಿ, "ಕಲ್ಯಾಣ ಕರ್ನಾಟಕ ಭಾಗದಲ್ಲಿ ತಾಯಿ ಮರಣ, ಶಿಶು ಮರಣ, ರಕ್ತಹೀನತೆ ಹಾಗೂ ಅಪೌಷ್ಟಿಕತೆಯಂತಹ ಗಂಭೀರ ಆರೋಗ್ಯ ಸಮಸ್ಯೆಗಳು ಇಂದಿಗೂ ಇವೆ. ರಾಯಚೂರಿಗೆ ಏಮ್ಸ್ ಮಂಜೂರಾದರೆ ಉನ್ನತ ಮಟ್ಟದ ಚಿಕಿತ್ಸೆ, ವೈದ್ಯಕೀಯ


3ನೇ ಪುಟಕ್ಕೆ

# ರಾಯಚೂರಿಗೆ ಏಮ್ಸ್ ಸ್ಥಾಪನೆಗೆ ಒತ್ತಾಯಿಸಿ ಮನವಿ

❏ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಸಂವಿಧಾನದ ವಿಧಿ 371(ಜೆ) ಅಡಿಯಲ್ಲಿ ವಿಶೇಷ ಸ್ಥಾನಮಾನ ಪಡೆದಿರುವ ಕಲ್ಯಾಣ ಕರ್ನಾಟಕ ಭಾಗವು ಅಭಿವೃದ್ಧಿಯ ಹಲವಾರು ಕ್ಷೇತ್ರಗಳಲ್ಲಿ ಇನ್ನೂ ಹಿಂದುಳಿದಿದ್ದು, ಅದರಲ್ಲೂ ಆರೋಗ್ಯ ಕ್ಷೇತ್ರದಲ್ಲಿ ತೀವ್ರ ಕೊರತೆ ಎದುರಿಸುತ್ತಿದೆ ಎಂದು ಏಮ್ಸ್ ಹೋರಾಟ ಸಮಿತಿ ಮಾನ್ವಿಯ ಸಂಚಾಲಕ ಎಚ್. ಶರ್ಪುದ್ದೀನ್ ಪೋತ್ನಾಳ್ ಹೇಳಿದರು.

ಇಂದು ಪಟ್ಟಣದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಗ್ರೇಡ್–2 ತಹಶೀಲ್ದಾರ್ ಅಬ್ದುಲ್ ವಾಹಿದ್ ಅವರ ಮುಖಾಂತರ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ರಾಯಚೂರು ಜಿಲ್ಲೆಯಲ್ಲಿ ಕಳೆದ 1500 ದಿನಗಳಿಂದ ಏಮ್ಸ್ ಸ್ಥಾಪನೆಗಾಗಿ ನಡೆಯುತ್ತಿರುವ




ಅನಿರ್ದಿಷ್ಟ ಧರಣಿ ಸತ್ಯಾಗ್ರಹಕ್ಕೆ ಬೆಂಬಲ ಸೂಚಿಸಲಾಗಿದ್ದು, ಜಿಲ್ಲೆಯ ಜನರ ಬಹುಕಾಲದ ಬೇಡಿಕೆಗೆ ಕೇಂದ್ರ ಸರ್ಕಾರ ಸ್ಪಂದಿಸಿ ರಾಯಚೂ–ರಿನಲ್ಲಿ ಏಮ್ಸ್ ಸ್ಥಾಪನೆಗೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರಾಯಚೂರು ಜಿಲ್ಲೆಯಲ್ಲಿ ಅಪೌಷ್ಟಿಕತೆ, ತಾಯಿ ಮತ್ತು ಶಿಶು ಮರಣ ಪ್ರಮಾಣ ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳು ಕಂಡುಬರುತ್ತಿದ್ದು, ಬಡ ಹಾಗೂ ಗ್ರಾಮೀಣ ಭಾಗದ ಜನರು ಉತ್ತಮ ವೈದ್ಯಕೀಯ ಸೇವೆಗಳಿಗಾಗಿ ದೂರದ ನಗರಗಳಿಗೆ ತೆರಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ರಾಯಚೂರಿನಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (ಏಮ್ಸ್) ಸ್ಥಾಪನೆಯಾದರೆ ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಅತ್ಯಾಧುನಿಕ ಆರೋಗ್ಯ ಸೇವೆಗಳು ದೊರೆಯಲಿದ್ದು, ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಎಂ.ಎ.ಹೆಚ್. ಮುಖಿಂ, ರಾಜು ತಾಳಿಕೋಟೆ, ಬಿ.ವಿ.ರೆಡ್ಡಿ, ತಾಯಪ್ಪ.ಬಿ.ಹೊಸೂರು, ಅನಿಲ್ ಕುಮಾರ್, ಭೀಮರಾಯ್, ಮಹಾಂತೇಶ್ ಓಲೇಕಾರ್, ಆಲೀಂ ಖಾನ್, ರಾಜಶೇಖರ್ ಪಾಟೀಲ್ ಬೋಗಾವತಿ, ಶಂಕ್ರಪ್ಪ ನಕ್ಕುಂದಿ, ಕೆ. ಎನ್.ಸಂದೀಪ್ ಸೇರಿದಂತೆ ಏಮ್ಸ್ ಹೋರಾಟ ಸಮಿತಿಯ ಪದಾಧಿಕಾರಿಗಳು ಹಾಗೂ ಹೋರಾಟಗಾರರು ಉಪಸ್ಥಿತರಿದ್ದರು.

## ಕಂಪ್ಲಿಯಲ್ಲಿ ಅನ್ನಭಾಗ್ಯ ಅಕ್ರಮ ಅಕ್ಕಿ ವಶ : ವಾಹನ ಹಾಗೂ ಅಕ್ಕಿ ಸಂಗ್ರಹಕಾರರ ಬಂಧನ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಪಟ್ಟಣದಿಂದ ಗಂಗಾವತಿ ಕಡೆಗೆ ಸಾಗಿಸುತ್ತಿದ್ದ ಅನ್ನಭಾಗ್ಯ ಯೋಜನೆ ಹಲವಾರು ಮೂಟೆ ಅಕ್ಕಿ, ಸಾಗಾಣಿಕೆಗೆ ಬಳಸಿದ ಟ್ಯಾಕ್ಟರ್ ಹಾಗೂ ಅಕ್ಕಿ ಸಂಗ್ರಹಿಸಿ ಸಾಗಿಸುತ್ತಿದ್ದ ಇಬ್ಬರು ಮಹಿಳೆಯರನ್ನು ಪಟ್ಟಣದ ಗಂಗಾವತಿ ರಸ್ತೆಯ ಕಲ್ಮಠದ ಹತ್ತಿರ ಆಹಾರ ಇಲಾಖೆಯ ಆಹಾರ ನಿರೀಕ್ಷಕ ವಿರೂಪಾಕ್ಷಗೌಡ ಮತ್ತು 112 ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಶುಕ್ರವಾರ ಸಂಜೆ ಖಚಿತ ಮಾಹಿತಿ ಮೇರೆಗೆ ಕಂಪ್ಲಿ ಕಲ್ಮಠದ ಹತ್ತಿರ ಟ್ಯಾಕ್ಟರ್ ನಲ್ಲಿ ಅಕ್ರಮವಾಗಿ ಅನ್ನಭಾಗ್ಯ ಅಕ್ಕಿಯನ್ನು ಸಾಗಿಸುತ್ತಿರುವ ವಾಹನವನ್ನು ವಶಕ್ಕೆ ಪಡೆದಿದ್ದಾರೆ. ಟ್ಯಾಕ್ಟರ್ ನಲ್ಲಿ ಮುವತ್ತು ಅಧಿಕ ಮೂಟೆ ಅನ್ನಭಾಗ್ಯ ಅಕ್ಕಿಯನ್ನು ದುರುಗಮ್ಮ ಮತ್ತು ಮಾರೆಮ್ಮ ಎನ್ನುವವರು ಪಟ್ಟಣದ ಎಂಡಿ ಕ್ಯಾಂಪಿನಲ್ಲಿ



ಸಂಗ್ರಹಿಸಿ ಗಂಗಾವತಿಗೆ ಸಾಗಿಸುವಾಗ ವಶಪಡಿಸಿಕೊಂಡಿದ್ದು, ಅಕ್ರಮ ಅನ್ನಭಾಗ್ಯ ಅಕ್ಕಿ, ವಾಹನ ಹಾಗೂ ಇಬ್ಬರು ಮಹಿಳೆಯರನ್ನು ವಶಪಡಿಸಿಕೊಂಡಿದ್ದು, ಕಂಪ್ಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಸಂದರ್ಭದಲ್ಲಿ ಆಹಾರ ಇಲಾಖೆ ನಿರೀಕ್ಷಕ ವಿರುಪಾಕ್ಷಗೌಡ, ಪೊಲೀಸ್ ಸಿಬ್ಬಂದಿಗಳು ಇದ್ದರು.

## ಕಿತ್ತೂರು ಚೆನ್ನಮ್ಮಳ ಮೂರ್ತಿ ಪ್ರತಿಷ್ಠಾಪನೆ ಇಂದು(ಜೂನ್.21)

❏ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದ ವೀರರಾಣಿ ಕಿತ್ತೂರು ಚೆನ್ನಮ್ಮ ಮೂರ್ತಿ ಪ್ರತಿಷ್ಠಾಪನಾ ಸೇವಾ ಸಮಿತಿ ವತಿಯಿಂದ ಮೂರನೇ ವಾರ್ಷಿಕೋತ್ಸವ ಅಂಗವಾಗಿ ಕಿತ್ತೂರು ರಾಣಿ ಚೆನ್ನಮ್ಮಳ ಭವ್ಯ ಮೂರ್ತಿಯ ಪ್ರತಿಷ್ಠಾಪನೆ ಇಂದು (ಜೂನ್ 21) ರಾಜವಾಡೆಯಲ್ಲಿ ನಡೆಯಲಿದೆ.

ಸುಮಾರು ಹದಿನೈದು ಅಡಿ ಎತ್ತರ, 600 ಕೆಜಿ ಭಾರದ ಹಾಗೂ 11 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಈ ಕಂಚಿನ ಪುತ್ಥಳಿಯನ್ನು ಸಕಲ ವಾದ್ಯ ಮೇಳ ಹಾಗೂ ಭವ್ಯ ಮೆರವಣಿಗೆಯೊಂದಿಗೆ ಪ್ರತಿಷ್ಠಾಪನಾ ಸ್ಥಳಕ್ಕೆ ತರಲಾಗುವುದು. ಇಂದು ಮಧ್ಯಾಹ್ನ 3–00 ಘಂಟೆಗೆ ಪಟ್ಟಣದ ದೇವರ ಹಿಪ್ಪರಗಿ ರಸ್ತೆ ಕೆಇಬಿ ಕಾರ್ಯಾಲಯದ ಮುಂಭಾಗದಲ್ಲಿರುವ ಕಿತ್ತೂರು ಚೆನ್ನಮ್ಮ



ವೃತ್ತದಿಂದ ಆರಂಭವಾಗುವ ಈ ಮೆರವಣಿಗೆಗೆ ಹಿಕ್ಕನುಗುತ್ತಿ ಲಿಂಗಾಯತ ಮಹಾಮಠದ ಮ.ನಿ.ಪ್ರ.ಶ್ರೀ ಪ್ರಭುಲಿಂಗ ಮಹಾಸ್ವಾಮಿಗಳು ಚಾಲನೆ ನೀಡುವರು.

ಅಲ್ಲಿಂದ ಆರಂಭವಾಗುವ ಮೆರವಣಿಗೆಯು ಶ್ರೀ ಬಸವೇಶ್ವರ ವೃತ್ತ, ಬಸ್ ನಿಲ್ದಾಣ ಮಾರ್ಗವಾಗಿ ಮಹಾರಾಣಾ ಪ್ರತಾಪ್ ಸಿಂಹ ವೃತ್ತ, ಶಿವಾಜಿ ಸರ್ಕಲ್, ಕತ್ರಿ ಬಜಾರ ಮಾರ್ಗವಾಗಿ ರಾಜವಾಡೆಗೆ ತಲುಪುವುದು. ಅಲ್ಲಿ ಲಿಂಗಾಯತ ಧರ್ಮದ ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿದ ನಂತರ ಚೆನ್ನಮ್ಮಳ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುವುದು. ನಂತರ ಅಲ್ಲಿಯೇ ನಿರ್ಮಾಣ ಮಾಡಿರುವ ವೇದಿಕೆಯಲ್ಲಿ ವಿಶೇಷ ಕಾರ್ಯಕ್ರಮ ಜರುಗುವುದು ಇದರಲ್ಲಿ ನಾಡಿನ ಹರ ಚರ ಗುರುಮೂರ್ತಿಗಳು ಸರ್ವ ಸಮಾಜದ ಗಣ್ಯರು ಹಾಗೂ ರಾಣಿ ಚೆನ್ನಮ್ಮಳ ಅಭಿಮಾನಿಗಳು ಉಪಸ್ಥಿತ–ರಿರುವರು.ಮೆರವಣಿಗೆ ಕಾರ್ಯಕ್ರಮದಲ್ಲಿ ನೂರಾರು ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ವೀರರಾಣಿ ಕಿತ್ತೂರು ಚೆನ್ನಮ್ಮ ಮೂರ್ತಿ ಪ್ರತಿಷ್ಠಾಪನಾ ಸೇವಾ ಸಮಿತಿಯ ಅಧ್ಯಕ್ಷರಾದ ನೀಲಮ್ಮಗೌಡತಿ ಪಾಟೀಲ,ಗೌರವ ಅಧ್ಯಕ್ಷರಾದ ಚಂದ್ರಶೇಖರ ಪಾಟೀಲ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಲೆ ಮತ್ತು ಸಾಹಿತ್ಯ ಹಾಗೂ ಸಮಾಜ ಸೇವೆಗೆ ಡಾ. ಅಬ್ದುಲ್ ಕಲಾಂ ಎಸ್ ಪಿ ಚಾರಿ ಟೇಬಲ್ ಫೌಂಡೇಶನ್ ಅಭಿವೃದ್ಧಿಯ ಕಡೆಗೆ : ಬಿ ಜಡಿಯಪ್ಪ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ತಾಲೂಕಿನ ಎಮ್ಮಿಗನೂರು ಗ್ರಾಮದಲ್ಲಿ ಜೂನ್ 20ರಂದು ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಯೋಗ ಅಭ್ಯಾಸ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಎಮ್ಮಿಗುನೂರಿನ ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ರಂಗಭೂಮಿ ನಿರಂತರವಾಗಿ ಕಾರ್ಯಾಗತ ಗೊಳಿಸಲು ಗ್ರಾಮೀಣ ಭಾಗದ ಎಲ್ಲಾಕಡೆ ಕಲೆ ಸಾಹಿತ್ಯ ಸಂಸ್ಕೃತಿಗೆ ಬಹಳಷ್ಟು ಕೊಡಿಗೆ ನೀಡುವಂತಹ ಕೆಲಸ ಈ ಭಾಗದಲ್ಲಿ ಇರುವ ಡಾ. ಅಬ್ದುಲ್ ಕಲಾಂ ಎಸ್ಪಿ ಚಾರಿಟೇಬಲ್



ಫೌಂಡೇಶನ್ ನಿರಂತರವಾಗಿ ಸಂಸ್ಕೃತಿಯನ್ನು ಉಳಿಸಿಕೊಂಡು ಬರುವಂತಹ ಕೆಲಸವನ್ನು ಮಾಡುತ್ತಿದೆ ಎಂದು ಭಜನೆ ಮತ್ತು ತತ್ವಪದಗಳ ಕಲಾವಿದರಾದ ಬಂಕದ ಸಿದ್ದಪ್ಪ ಹೇಳಿದರು. ಈ ದಿನದಲ್ಲಿ ಕಲೆ ಸಾಹಿತ್ಯ ಸಂಸ್ಕೃತಿ ಜಾನಪದ ಗೀತೆ ತತ್ವಪದಗಳಿಗೆ ಮನ್ನಣೆ ಬೇಕಾಗಿದೆ ಎಂದು ಅಡಿಗೆ ಸಹಾಯಕರಾದ ಮಾರೇಶ ಅವರು ತಿಳಿಸಿದರು.

ಕಲೆ ಮತ್ತು ಸಾಹಿತ್ಯದ ಅಭಿರುಚಿಯನ್ನು ಪ್ರತಿಯೊಬ್ಬರು ಚಿಕ್ಕ ವಯಸ್ಸಿನಲ್ಲಿ ಅಳವಡಿಸಿಕೊಂಡು ಮುನ್ನುಗ್ಗುವ ಸಾಹಸವನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು ಎಂದು ಪಿ ಸಾದಾಕಲಿ ಅವರು ತಿಳಿಸಿದರು. ಯೋಗ ಅಭ್ಯಾಸದಿಂದ ಸರ್ವ ರೋಗಗಳನ್ನು ನಿಯಂತ್ರಿಸುವ ಕೆಲಸವನ್ನು ಯೋಗದಿಂದ ಮಾತ್ರ ಸಾಧ್ಯ ಹಾಗೂ ಪ್ರತಿ ಕುಟುಂಬದಲ್ಲಿ ಅನಾರೋಗ್ಯವನ್ನು ದೂರ ಮಾಡಬೇಕು ಆರೋಗ್ಯಕರವಾಗಿ ಇರಬೇಕೆಂದರೆ ಯೋಗ ಅತ್ಯಂತ ಪ್ರಮುಖವಾಗಿರುವಂಥದ್ದು ಎಂದು ಡಾ. ಪ್ರಹ್ಲಾದ್ ಆರ್ ಹೈಲಿ ಅವರು ತಿಳಿಸಿದರು. ಮಾನಸಿಕವಾಗಿ ದೈಹಿಕವಾಗಿ ಸದೃಢರಾಗಲು ಯೋಗ ಧ್ಯಾನವನ್ನು ಕೈಗೊಳ್ಳಬೇಕು ಎಂದು ಆಯುಷ್ಮಾನ್ ಇಲಾಖೆ ಯ ಅಧಿಕಾರಿ ಬಸವರಾಜ್ ತಿಳಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳು ಭಜನಾ ಮತ್ತು ತತ್ವಪದಗಳ ಕಲಾವಿದರಾದ ಬಸವರಾಜ್ ಪಾಂಡುರಂಗ, ರಾಜಭಕ್ಷಿ ಯೋಗ ನೃತ್ಯ ಪೀರ್ ಮೊಹಮ್ಮದ್ ತಂಡದವರು ತತ್ವಪದಗಳ ಟಿ. ಸಾಧಕಲಿ ತಂಡದವರು ಸಮೂಹ ನೃತ್ಯ ಚಾಂದ್ ವಿ ತಂಡದವರು ನೆರವೇರಿಸಿದರು. ಊರಿನ ಸರ್ವ ಸಮುದಾಯದ ಸದ್ಭಕ್ತರು ಕಲಾವಿದರು ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಸಾಹಿತ್ಯ ಸಿಂಚನ

### ಅಪ್ಪ

ಅಪ್ಪ ಎಂದರೆ ನೆರಳಾದ ಮರ,
ಬಿಸಿಲಿನಲ್ಲೂ ಕೊಡುವರು ತಂಪಾದ ಸವರ.
ತಮ್ಮ ಕನಸುಗಳನ್ನು ಮೌನದಲ್ಲಿ ಮರೆತು,
ಮಕ್ಕಳ ಕನಸುಗಳಿಗೆ ರೆಕ್ಕೆ ಕಟ್ಟುವವರು.

ಬೆಳಗಿನ ಸೂರ್ಯನಂತೆ ಶ್ರಮಿಸುವರು,
ರಾತ್ರಿಯ ಚಂದ್ರನಂತೆ ಕಾವಲಿರುವರು.
ತಮ್ಮ ದಣಿವು ಎಂದಿಗೂ ತೋರಿಸದೆ,
ನಮ್ಮ ನಗುವಿಗೋಸ್ಕರ ಬದುಕುವರು.

ಕೈ ಹಿಡಿದು ನಡೆಯಲು ಕಲಿಸಿದವರು,
ಬಿದ್ದು ಎದ್ದೇಳಲು ಧೈರ್ಯ ತುಂಬಿದವರು.
ಜೀವನದ ಪಾಠವನ್ನು ನಿಶ್ಯಬ್ದದಲ್ಲಿ ಹೇಳಿ,
ಸಾಧನೆಯ ದಾರಿಗೆ ಬೆಳಕಾದವರು.

ಅಪ್ಪನ ಪ್ರೀತಿ ಸಮುದ್ರದಷ್ಟು ಆಳ,
ಅವರ ತ್ಯಾಗಕ್ಕೆ ಇಲ್ಲ ಯಾವ ತೂಲಾ.
ಹೃದಯದಲ್ಲಿ ಸದಾ ಉಳಿಯುವ ಹೆಸರು?
ನನ್ನ ಅಪ್ಪ, ನನ್ನ ಹೆಮ್ಮೆ, ನನ್ನ ಬಲ

**ಅಮರೇಶ್**

## ವಿಶ್ವರಕ್ತದಾನಿಗಳ ದಿನ ಒಬ್ಬ ವ್ಯಕ್ತಿಯ ಜೀವ ಉಳಿಸುವ ರಕ್ತವನ್ನು ದಾನ ಮಾಡುವ ಸಂಪ್ರದಾಯ ನಮ್ಮದಾಗಲಿ.

**ನೈಜ್ಯ ದೆಸೆ ನ್ಯೂಸ್**

**ಪ್ರತಿಯೊಬ್ಬರ ಜೀವನದಲ್ಲಿ ಆಕಸ್ಮಿಕ ಘಟನೆಗಳಿಂದ ಅಥವಾ ಗರ್ಭಿಣಿಯರಿಗೆ, ರಕ್ತಹೀನತೆಯಿಂದ ಬಳಲುವವರಿಗೆ ರಕ್ತದ ಅವಶ್ಯಕತೆಯ ಸಂದರ್ಭದಲ್ಲಿ ದಾನಿಗಳಿಂದ ರಕ್ತವನ್ನು ತಕ್ಷಣದಲ್ಲಿ ಪಡೆಯಲು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಸ್ವಯಂಪ್ರೇರಿತ ರಕ್ತದಾನದ ಮೂಲಕ ಅಮೂಲ್ಯ ಜೀವವನ್ನು ಉಳಿಸುವ ಪುಣ್ಯದ ಕಾರ್ಯಕ್ಕೆ ಪ್ರತಿಯೊಬ್ಬರೂ ಕೈಜೊಡಿಸಲು ಮುಂದೆ ಬನ್ನಿ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ ಗಣೇಶ ಕೆ ವಿನಂತಿಸಿದರು.**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ಆಶ್ರಯದಲ್ಲಿ ಆರೋಗ್ಯ ಇಲಾಖೆಯ ಕೃಷ್ಣ ಸಭಾಂಗಣದಲ್ಲಿ ವಿಶ್ವ ರಕ್ತದಾನ ದಿನದ ಅಂಗವಾಗಿ ಇನ್ನೊಬ್ಬರ ಜೀವ ಉಳಿಸಲು ಯಾವುದೇ ಪ್ರತಿಫಲವಿಲ್ಲದೆ ಅತಿ ಹೆಚ್ಚು ಬಾರಿ ರಕ್ತದಾನ ಮಾಡಿದ ದಾನಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಇಂದು



ಅತಿ ಹೆಚ್ಚುಬಾರಿ ರಕ್ತದಾನ ಮಾಡಿದ ದಾನಿಗಳು ನಮ್ಮ ಜಿಲ್ಲೆಯವರೂ ಇದ್ದಾರೆ, ರಕ್ತದಾನದಿಂದ ಕೆಲವೇ ದಿನಗಳಲ್ಲಿ ಹೊಸ ರಕ್ತ ಉತ್ಪತ್ತಿಯಾಗಿ, ರಕ್ತದೊತ್ತಡ, ಸಕ್ಕರೆ ಕಾಯಿಲೆಯಂತಹ ರೋಗಗಳು ದೂರವಾಗುತ್ತವೆ, ಹೊಸ ಚೈತನ್ಯ, ಉಲ್ಲಾಸ ಕಂಡುಬರುತ್ತದೆ ಎಂದು ತಿಳಿಸಿದರು.

ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ ಮಹಮ್ಮದ್ ಶಾಕೀರ್ ಮೊಹಿಯುದ್ದೀನ್ ಮಾತನಾಡಿ ಈಗಾಗಲೆ ಜಿಲ್ಲೆಯಾದ್ಯಂತ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ರಕ್ತದಾನ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ರಕ್ತಕ್ಕೆ ವರ್ಷವಿಡಿ ನಿರಂತರವಾಗಿ ಬೇಡಿಕೆ ಇರುತ್ತದೆ. ಮುಖ್ಯವಾಗಿ ರಕ್ತಹೀನತೆಯಿಂದ ಬಳಲುವ ಗರ್ಭಿಣಿ ಸ್ತ್ರೀಯರು, ಹೆರಿಗೆ ಸಂದರ್ಭದಲ್ಲಿ, ತುರ್ತು ಶಸ್ತ್ರಚಿಕಿತ್ಸೆಗಳ ಸಂದರ್ಭಗಳಿಗೆ, ಇತ್ತೀಚಿಗೆ ಹೆಚ್ಚಾಗುತ್ತಿರುವ ಅಪಘಾತಗಳು, ಜೊತೆಯಲ್ಲಿ ಕ್ಯಾನ್ಸರ್ ರೋಗಿಗಳು, ಥ್ಯಾಲಸೀಮಿಯಾ, ಹಿಮೊಫಿಲಿಯಾ ಮುಂತಾದ ರೋಗಿಗಳು ರಕ್ತದಾನಿಗಳನ್ನೇ ಅವಲಂಬಿಸಿರುತ್ತಾರೆ. ಈ ಎಲ್ಲ ಹಿನ್ನಲೆಯಲ್ಲಿ ಹೆಚ್ಚಿನ ರಕ್ತದ ಅವಶ್ಯಕತೆಯಿದ್ದು, 18 ವರ್ಷ ಮೇಲ್ಪಟ್ಟ ಆರೋಗ್ಯವಂತ ವ್ಯಕ್ತಿಯು ಯಾವುದೇ ಅಳುಕಿಲ್ಲದೆ ರಕ್ತದಾನ ಮಾಡಲು ವಿನಂತಿಸಿದರು.

ಸನ್ಮಾನ ಸ್ವೀಕರಿಸಿದ ದಾನಿಗಳು;
ಮಂಜುನಾಥ, 50 ಬಾರಿ,
ರವಿಚಂದ್ರ, 40 ಬಾರಿ,
ಗೊಂವಿಂದದಾಸ್, 35 ಬಾರಿ,
ಪ್ರೇಮಕುಮಾರ್, 30 ಬಾರಿ

ಈ ಸಂದರ್ಭದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ ನಂದಿತಾ ಎಮ್ ಎನ್, ಮಹಿಳಾ ಪದವಿ ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿ ಡಾ ಸಂತೋಷ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಡ್ಯಾಪ್ಕೋ ಮೇಲ್ವಿಚಾರಕರು ಮಲ್ಲಯ್ಯ ಮಠಪತಿ, ಸಿಪಿಓ ಬಸವರಾಪ್ಪಗೌಡ, ಬೆಹೆಚ್‌ಇಓ ನಾಗರಾಜ್, ಡ್ಯಾಪ್ಕೋ ಸಿಬ್ಬಂದಿ ಶಾಂತಕುಮಾರ, ಸೀಮಾಲತಾ, ಮಲ್ಲಮ್ಮ ಹಿರೇಮಠ ಹಾಗೂ ಬ್ಲಡ್ ಬ್ಯಾಂಕ್ ಸಿಬ್ಬಂದಿಯವರು, ಎನ್-ಎಸ್‌ಎಸ್ ಸೇವಾಕರ್ತರು, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

## ಹೊಸ ಕಾರ್ಮಿಕ ಸಂಹಿತೆ ಜಾಗೃತಿ ಕಾರ್ಯಾಗಾರ

**ನೈಜ್ಯ ದೆಸೆ ನ್ಯೂಸ್**

**ಬಳ್ಳಾರಿ: ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಹಾಗೂ ಮಿತ್ರಾ ಟೆಕ್ನಾಲಜೀಸ್ ಜಂಟಿಯಾಗಿ "ಹೊಸ ಕಾರ್ಮಿಕ ಸಂಹಿತೆ-2025ರ ಜಾಗೃತಿ ಕಾರ್ಯಾಗಾರವು ಸಂಸ್ಥೆಯ ಸಭಾಂಗಣದಲ್ಲಿ ಇಂದು ನಡೆಯಿತು.**




ಇಎಸ್‌ಐಸಿನ ನಿವೃತ್ತ ಅಧಿಕಾರಿ ಶೇಖ್ ಹನೀಫ್, ಇಎಸ್‌ಐಸಿ ಮತ್ತು ಇಪಿಎಫ್‌ಒಗಳ ಹೊಸ ನಿಯಮ ಗಳು ಮತ್ತು ಉದ್ಯೋಗಿಗಳ ಸಾಮಾಜಿಕ ಭದ್ರತೆ, ಕಾನೂನುಬದ್ದ ಸೌಲಭ್ಯಗಳು ಹಾಗೂ ವೇತನ ಪಾವ ತಿಯ ದಾಖಲೆಗಳ ನಿರ್ವಹಣಾ ವ್ಯವಸ್ಥೆಯ ಕುರಿತು ಮಾಹಿತಿ ನೀಡಿದರು. ಸಂಸ್ಥೆಯ ಅಧ್ಯಕ್ಷ ಅವ್ವಾರ್ ಮಂಜುನಾಥ್ ಪ್ರಾಸ್ತಾವಿಕವಾಗಿ ಮಾತನಾಡಿ, ಹೊಸ ಕಾರ್ಮಿಕ ಸಂಹಿತೆ-2025ರ ಕು-ರಿತು ಕೈಗಾರಿಕಾ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಇರುವ ಮಾನವ ಸಂಪ ನ್ಮೂಲ ವಿಭಾಗದ ಪ್ರತಿಯೊಬ್ಬರೂ ತಿಳಿದು ಕೊಂಡು, ಅರ್ಥ ಮಾಡಿಕೊಳ್ಳಬೇಕು. ಈ ಮೂಲಕ ಕೆಲಸಗಾರರಿಗೆ ಹೆಚ್ಚಿನ ಪ್ರಮಾಣದಲಿ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ರಿ) ಕೇಂದ್ರ ಸರ್ಕಾರದ ಸೌಲಭ್ಯಗಳು ಸಿಗುವಂತೆ ಮುಂಜಾಗ್ರತೆಗಳನ್ನು ಕೈಗೊಳ್ಳಲು ಅನುಕೂಲವಾ ಗಲಿದೆಂದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಸಿ. ಸುರೇಶ ಬಾಬು ವಂದನಾರ್ಪಣೆ ಸಲ್ಲಿಸಿದರು. ಹಿರಿಯ ಉಪಾಧ್ಯಕ್ಷ ಎಸ್. ದೊಡ್ಡನಗೌಡ, ಉಪಾಧ್ಯಕ್ಷ ಸೊಂತಾ ಗಿರಿಧರ್, ಜಂಟಿ ಕಾರ್ಯದರ್ಶಿ, ಡಾ. ಮರ್ಚೆಡ್ ಮಲ್ಲಿಕಾ ರ್ಜುನಗೌಡ, ವಿ. ರಾಮಚಂದ್ರ, ಖಜಾಂಚಿಗ ಳಾದ ಸಿ.ಎಸ್. ಸತ.ನಾರಾಯಣ. ಈವೆಂಟ್ ಕಮಿಟಿ ಚೇರ್ಮನ್ ನೇಕಾರ್ ನಾಗರಾಜ್, ಪತ್ರಿಕಾ ಹಾಗೂ ಮಾಧ್ಯಮ ಕಮಿಟಿ ಚೇರ್ಮನ್ ಟಿ. ಶ್ರೀನಿವಾಸರಾವ್, ಮ್ಯಾಗ್ವಿನ್ ಕಮಿಟಿ ಚೇರ್ಮನ್ ಕೌಡಕಿ ಹನುಮೇಶ್, ಬುಸ್ಮಾದ ಮರಿ ಸ್ವಾಮಿರೆಡ್ಡಿ, ಖಾಸಗಿ ಶಾಲೆಗಳ ಮಾನವ ಸಂಪ ನ್ಮೂಲ ವಿಭಾಗದ ಮುಖ್ಯಸ್ಥರು, ವಿವಿಧ ಕೈಗಾರಿ ಗಳು ಸಂಘ ; ಸಂಸ್ಥೆಗಳ ಮುಖ್ಯಸ್ಥರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

# ಜೂನ 28 ರಂದು ಪಲ್ಸ್ ಪೋಲಿಯೊ

## ಕ್ಯೂಆರ್ ಕೋಡ್ ಮೂಲಕ ರಾಯಚೂರು ನಗರದ ಪೋಲಿಯೊ ಬೂತ್‌ಗಳ ಮಾಹಿತಿ ಪಡೆಯಿರಿ.

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಅಧಿಕಾರಿಗಳ ವಿಭಾಗ ರಾಯಚೂರು, ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ರಾಯಚೂರು ರವರ ಮೂಲಕ ತಾಲೂಕಾ ಆರೋಗ್ಯಾಧಿಕಾರಿ ಡಾ ಅಮೃತ್ ಹುಕ್ಕೇರಿ ಪತ್ರಿಕಾ ಪ್ರಕಟಣೆ ನೀಡಿ, ನೆರೆಯ ರಾಷ್ಟ್ರಗಳಲ್ಲಿ ಪೋಲಿಯೊ ಪ್ರಕರಣಗಳು ವರದಿಯಾಗಿದ್ದು ಈ ಹಿನ್ನಲೆಯಲ್ಲಿ ಇದೆ ಜೂನ 28 ರಂದು ರಾಷ್ಟ್ರಾದ್ಯಂತ ಪಲ್ಸ್ ಪೋಲಿಯೊ ಲಸಿಕಾ ಅಭಿಯಾನ ಜರುಗಲಿದ್ದು,**

TQRCG


ರಾಯಚೂರು ತಾಲೂಕಿನಲ್ಲಿ ಸಹ ಹುಟ್ಟಿನಿಂದ ಐದು ವರ್ಷದ ಒಳಗಿನ ಮಕ್ಕಳಿಗೆ ಎರಡು ಹನಿ ಪೋಲಿಯೊ ಲಸಿಕೆ ಹಾಕಲಾಗುವುದು. ಅಲ್ಲದೆ, ರಾಯಚೂರು ನಗರ ಪ್ರದೇಶದ ವ್ಯಾಪ್ತಿಯ ಪೋಲಿಯೊ ಬೂತ್‌ಗಳ ಮಾಹಿತಿಯನ್ನು ಸಾರ್ವಜನಿಕ-ರಿಗೆ ಅನುಕೂಲವಾಗಿಸಲು ತಮ್ಮ ಮನೆಯ ಹತ್ತಿರದ ಬೂತ್‌ಗಳಲ್ಲಿ ಸಹ ಲಸಿಕೆ ಹಾಕಿಸಲು, ತಮ್ಮ ಮೊಬೈಲ್ ಗಳಲ್ಲಿ ಸದರಿ ಕ್ಯೂಆರ್ ಕೋಡ್ ಮೂಲಕ ಮಾಹಿತಿ ಪಡೆಯಲು ಅನೂಕೂಲವಾಗುವಂತೆ ಸಿದ್ದಪಡಿಸಲಾಗಿದ್ದು ಸಾರ್ವಜನಿಕರು ಇದರ ಸದುಪಯೋಗ ಪಡೆಯಲು ಕೊರಿದ್ದಾರೆ.

ಅಲ್ಲದೆ ಪ್ರೀ ಆಕ್ಟೀವಿಟಿ ದಿನಾಂಕ ಜೂನ 23, 24, 25 ರ ಮೂರು ದಿನಗಳ ವರೆಗೆ ಅಂಗನವಾಡಿ, ಶಿಶುವಿಹಾರ, ಖಾಸಗಿ ಕಿಂಡರ್ ಗಾರ್ಟನ್‌ಗಳಲ್ಲಿಯ ಐದು ವರ್ಷದ ಮಕ್ಕಳಿಗೆ ಪೋಲಿಯೋ ಹನಿ ಹಾಕಲಾಗುವುದು ಎಂದು ತಿಳಿಸಿ ಸಾರ್ವಜನಿಕರು ಪೋಲಿಯೊ ಮುಕ್ತ ಭಾರತಕ್ಕಾಗಿ ಕೈಜೋಡಿಸಲು ಕೊರಿದ್ದಾರೆ.

## ಹಿಂದೂ ಮುಸ್ಲಿಂ ಭಾವೈಕ್ಯತೆ ಸಂಗಮವೇ ಮೊಹರಮ್ ಹಬ್ಬ:ಗುರುಚಂದ್ರ ಯಾದವ ಪಿಎಸ್‌ಐ

**ನೈಜ್ಯ ದೆಸೆ ನ್ಯೂಸ್**

**ಮಸ್ಕಿ ತಾಲ್ಲೂಕು ಹಾಲಾಪೂರ ಗ್ರಾಮದಲ್ಲಿ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಕವಿತಾಳ ಪೊಲೀಸ್ ಠಾಣೆ ಪಿಎಸ್‌ಐ ಗುರುಚಂದ್ರ ಯಾದವ ರವರು ಮೊಹರಮ್ ಹಬ್ಬದ ಪ್ರಯುಕ್ತ ಗ್ರಾಮಸ್ಥರ ಜೊತೆ ಶಾಂತಿ ಸಭೆ ನಡೆಸಿ ಮಾತನಾಡುತ್ತಾ ಹಬ್ಬಗಳನ್ನು** ಬಂಧುಬಾಂಧವರನ್ನು ಹಬ್ಬದ ವೇಳೆಯಲ್ಲಿ ಸರಿಯಾಗಿ ನಿಯಂತ್ರಣದಲ್ಲಿಟ್ಟು ಅವರ ಮೇಲೆ ಕಾಳಜಿವಹಿಸಿ,ಈತರ ಪ್ರತಿಯೊಬ್ಬರೂ ಮಾಡುವುದರಿಂದ ಯಾವುದೇ ಗಲಾಟೆ,ಜಗಳ ಸಂಭವಿಸುವುದಿಲ್ಲ ಯಾರು ಕೂಡ ಪೋಲಿಸ್ ಠಾಣೆ, ಕಛೇರಿ, ಕೋರ್ಟ್ ಗೆ ಅಳೆಯುವ ಪ್ರಸಂಗವೇ ಬರುವುದಿಲ್ಲ, ಪೋಲಿಸ್



**ಗ್ರಾಮಸ್ಥರು ಅಣ್ಣಾ ತಮ್ಮರಂತೆ ಬಾಂಧ್ಯವದಿಂದ ಆಚರಿಸಬೇಕು,ವಿಶೇಷವಾಗಿ ಮೊಹರಮ್ ಹಬ್ಬವು ಹಿಂದೂ ಮುಸ್ಲಿಂ ಭಾವೈಕ್ಯ ಸಂಗಮದ ಸಂಕೇತ,**

ಎಲ್ಲರೂ ಸೇರಿ ಪ್ರೀತಿ ವಿಶ್ವಾಸದಿಂದ ಹಬ್ಬಗಳನ್ನು ಗ್ರಾಮಗಳಲ್ಲಿ ಸಹೊದರತ್ವ ಭಾವನೆ ಬೆಳಸಿಕೊಳ್ಳಿ, ನಿಮ್ಮ ಮಕ್ಕಳನ್ನು, ಇಲಾಖೆಗೂ ಕೂಡ ನಿಮ್ಮ ಊರಿನ ಬಗ್ಗೆ ಹೆಮ್ಮೆ ಇರುತ್ತದೆ . ಅದಕ್ಕಾಗಿ ಪ್ರತಿಯೊಬ್ಬರೂ ಶಾಂತಿ ಸುವ್ಯವಸ್ಥೆ, ಕಾನೂನು ಪಾಲಿಸಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು, ಯುವಕರು ಇನ್ನಿತರರು ಇದ್ದರು.

## ಸರ್ಕಾರಿ ಶಾಲೆಗಳ ಸಶಕ್ತೀಕರಣಕ್ಕೆ ಆಗ್ರಹ: 'ನಮ್ಮ ಮಕ್ಕಳು ಸರ್ಕಾರಿ ಶಾಲೆಗೆ' ಆಂದೋಲನಕ್ಕೆ ಚಾಲನೆ

**ನೈಜ್ಯ ದೆಸೆ ನ್ಯೂಸ್**

**ರಾಮನಗರ: ಜಿಲ್ಲೆಯ ಸರ್ಕಾರಿ ಶಾಲೆಗಳ ಅಭಿವೃದ್ಧಿ, ಮೂಲಸೌಕರ್ಯ ಸುಧಾರಣೆ ಹಾಗೂ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಳಕ್ಕೆ ಆದ್ಯತೆ ನೀಡುವಂತೆ ಕರ್ನಾಟಕ ರಾಜ್ಯ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಸಮನ್ವಯ ಕೇಂದ್ರ ವೇದಿಕೆ ಆಗ್ರಹಿಸಿದೆ.**

ನಗರದಲ್ಲಿ ನಡೆದ ಶಿಕ್ಷಣ ಅಭಿವೃದ್ಧಿ ಸಭೆಯಲ್ಲಿ ಮಾತನಾಡಿದ ವೇದಿಕೆಯ ಜಿಲ್ಲಾಧ್ಯಕ್ಷ ವೆಂಕಟೇಶ್, ಜಿಲ್ಲೆಯ ಸರ್ಕಾರಿ ಶಾಲೆಗಳ ಸ್ಥಿತಿಗತಿ ಪರಿಶೀಲನೆಗಾಗಿ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಥ ಮಹೇಶ್ ಅವರನ್ನು ಜಿಲ್ಲೆಗೆ ಕರೆಸಿ ಸಮಸ್ಯೆಗಳ ಕುರಿತು ಚರ್ಚಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು. ಜಿಲ್ಲೆಯ ಹಲವು ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯ ಕೊರತೆ, ಶೌಚಾಲಯ ಸಮಸ್ಯೆ, ಕುಡಿಯುವ ನೀರಿನ ಅಭಾವ ಹಾಗೂ ಶಿಕ್ಷಕರ ಕೊರತೆ ಎದುರಾಗಿದೆ. ಕೆಲ ಶಾಲೆಗಳಲ್ಲಿ ಒಬ್ಬ ಶಿಕ್ಷಕರೇ ಐದು ತರಗತಿಗಳನ್ನು ನಿರ್ವಹಿಸುವ ಪರಿಸ್ಥಿತಿ ಇದೆ. ಈ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದು ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.

"ಸರ್ಕಾರಿ ಶಾಲೆಗಳನ್ನು ಉಳಿಸುವುದು ಪ್ರತಿಯೊಬ್ಬರ ಜವಾಬ್ದಾರಿ. ಖಾಸಗಿ ಶಾಲೆಗಳತ್ತ ಮಕ್ಕಳನ್ನು ಕಳುಹಿಸುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಇದನ್ನು ತಡೆಯಲು ಜಿಲ್ಲೆಯಾದ್ಯಂತ 'ನಮ್ಮ ಮಕ್ಕಳು ಸರ್ಕಾರಿ ಶಾಲೆಗೆ' ಎಂಬ ಜನಜಾಗೃತಿ ಆಂದೋಲನ ಆರಂಭಿಸಲಾಗುವುದು" ಎಂದು ವೆಂಕಟೇಶ್ ಹೇಳಿದರು.

ಈ ಅಭಿಯಾನದಡಿ ಶಿಕ್ಷಕರು, ಎಸ್‌ಡಿ-



ಎಂಸಿ ಸದಸ್ಯರು ಹಾಗೂ ಸ್ಥಳೀಯ ಮುಖಂಡರು ಮನೆಮನೆಗೆ ತೆರಳಿ ಪೋಷಕರಿಗೆ ಸರ್ಕಾರಿ ಶಾಲೆಗಳ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಲಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಉಚಿತ ಶಿಕ್ಷಣ, ಸಮವಸ್ತ್ರ, ಪಠ್ಯಪುಸ್ತಕ, ಮಧ್ಯಾಹ್ನದ ಬಿಸಿಯೂಟ, ಮೊಟ್ಟೆ, ಬಾಳೆಹಣ್ಣು ಹಾಗೂ ಹಾಲಿನಂತಹ ಸೌಲಭ್ಯಗಳು ಲಭ್ಯವಿವೆ ಎಂಬುದನ್ನು ತಿಳಿಸಲಾಗುವುದು ಎಂದರು. ಕೆಪಿಎಸ್ ಶಾಲೆಗಳ ಕುರಿತು ಚರ್ಚೆ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಕೆಪಿಎಸ್ ಶಾಲೆ ಆರಂಭಿಸುವ ಸರ್ಕಾರದ ಯೋಜನೆಯನ್ನು ಸ್ವಾಗತಿಸಿದ ಅವರು, ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆಗೆ ಹೋಲಿಸಿದರೆ ಕೆಪಿ-ಎಸ್ ಶಾಲೆಗಳ ಸಂಖ್ಯೆ ಕಡಿಮೆಯಾಗಿದೆ. ಎಲ್ಲಾ ಪಂಚಾಯಿತಿಗಳಿಗೂ ಗುಣಮಟ್ಟದ ಸರ್ಕಾರಿ ಶಾಲೆ ದೊರೆಯಬೇಕು ಎಂದು ಒತ್ತಾಯಿಸಿದರು.

ಕೆಪಿಎಸ್ ಪಬ್ಲಿಕ್ ಶಾಲೆಗಳ ಹೆಸರಿನಲ್ಲಿ ಈಗಿರುವ ಸರ್ಕಾರಿ ಶಾಲೆಗಳ ಬಲ ಕುಗ್ಗಬಾರದು. ಒಂದು ಶಾಲೆಯನ್ನು ಅಭಿವೃದ್ಧಿಪಡಿಸುವ ಹೆಸರಿನಲ್ಲಿ ಸುತ್ತಮುತ್ತಲಿನ ಸರ್ಕಾರಿ ಶಾಲೆಗಳು ಮುಚ್ಚುವ ಪರಿಸ್ಥಿತಿ ನಿರ್ಮಾಣವಾಗಬಾರದು ಎಂದು ಅಭಿಪ್ರಾಯಪಟ್ಟರು. ಎಲ್ಲಾ ಶಿಕ್ಷಕರು ಮೇ 28ರೊಳಗೆ ಮಕ್ಕಳ ದಾಖಲಾತಿ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಜೂನ್ 1ರಿಂದ ಶಾಲೆಗಳು ಆರಂಭವಾಗಲಿದ್ದು,

# ಅವೈಜ್ಞಾನಿಕವಾಗಿ ವಿದ್ಯುತ್ ತಂತಿಗಳ ಕೆಳಗೆ ಸಸಿ ನೆಡುವುದರಿಂದ ಸಾರ್ವಜನಿಕರ ತೆರಿಗೆ ಹಣ ಪೋಲು: ಅರಣ್ಯ ಇಲಾಖೆಗೆ AIMIM ಮನವಿ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಪರಿಸರ ಸಂರಕ್ಷಣೆ ಹಾಗೂ ಹಸಿರು ಅಭಿವೃದ್ಧಿಯ ಉದ್ದೇಶದಿಂದ ಅರಣ್ಯ ಇಲಾಖೆಯು ರಸ್ತೆ ಮತ್ತು ಹೆದ್ದಾರಿಗಳ ಬದಿಯಲ್ಲಿ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಸಸಿ ನೆಡುವ ಕಾರ್ಯ ಕೈಗೊಂಡಿದ್ದರೂ, ಸಮರ್ಪಕ ಯೋಜನೆಯಿಲ್ಲದೆ ವಿದ್ಯುತ್ ತಂತಿಗಳ ಕೆಳಗೆ ಸಸಿಗಳನ್ನು ನೆಡುತ್ತಿರುವುದರಿಂದ ಸಾರ್ವಜನಿಕರ ತೆರಿಗೆ ಹಣ ವ್ಯರ್ಥವಾಗುತ್ತಿದೆ ಎಂದು ಆಲ್ ಇಂಡಿಯಾ ಮಜ್ಲಿಸ್-ಎ-ಇತ್ತೇಹಾದುಲ್-ಮುಸ್ಲಿಮೀನ್ (ಂಋಒಋಒ) ಪಕ್ಷದ ರಾಯಚೂರು ನಗರ ಅಧ್ಯಕ್ಷ ಶಬ್ಬೀರ್ ಅಹ್ಮದ್ ಹೌದಾದಿ ಆರೋಪಿಸಿದ್ದಾರೆ.**

ಈ ಕುರಿತು ಅವರು ಕಲಬುರ್ಗಿ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ರಾಯಚೂರಿನ ಉಪ ಅರಣ್ಯ ಸಂರಕ್ಷಣಾಧಿಕಾ-ರಿಗಳಿಗೆ ಜೂನ್ 20, 2026 ರಂದು ಅಧಿಕೃತ ಮನವಿ ಪತ್ರ ಸಲ್ಲಿಸಿದ್ದಾರೆ. ವಿದ್ಯುತ್ ತಂತಿಗಳ ಕೆಳಗೆ ಸಸಿ ನೆಡುವುದರಿಂದ ಉಂಟಾಗುವ ಸಮಸ್ಯೆಗಳು

ವಿದ್ಯುತ್ ವ್ಯತ್ಯಯ ಮತ್ತು ಶಾರ್ಟ್ ಸರ್ಕ್ಯೂಟ್:



ಮರಗಳು ಬೆಳೆದು ದೊಡ್ಡದಾದಾಗ ಅವುಗಳ ಗಾಳಿಯ ಸಂದರ್ಭದಲ್ಲಿ ಘರ್ಷಣೆಯಿಂದ ಕೊಂಬೆಗಳು ವಿದ್ಯುತ್ ತಂತಿಗಳಿಗೆ ತಾಗಿ, ವಿದ್ಯುತ್ ಪೂರೈಕೆ ಸ್ಥಗಿತಗೊಳ್ಳುವ ಸಾಧ್ಯತೆ ಹೆಚ್ಚುತ್ತದೆ. ?? ಗೃಹೋಪಯೋಗಿ ಉಪಕರಣಗಳ ಹಾನಿ: ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟುಹೋಗುವ ಅಪಾಯವಿದ್ದು, ಟಿವಿ, ಫ್ರಿಡ್ಜ್ ಸೇರಿದಂತೆ ಮನೆಗಳಲ್ಲಿನ ಬೆಲೆಬಾಳುವ ವಿದ್ಯುತ್ ಉಪಕರಣಗಳಿಗೆ ಹಾನಿಯಾಗುತ್ತದೆ.

ಬೀದಿ ದೀಪಗಳ ಬೆಳಕು ಅಡ್ಡಿಯಾಗುವುದು: ಮರಗಳ ಕೊಂಬೆಗಳು ಬೀದಿ ದೀಪಗಳನ್ನು ಮುಚ್ಚುವುದರಿಂದ ರಸ್ತೆಗಳು ಕತ್ತಲಲ್ಲಿ ಮುಳುಗುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇತರ ಇಲಾಖೆಗಳಿಗೆ ಹೆಚ್ಚುವರಿ ಹೊರೆ: ಮರಗಳ ಕೊಂಬೆಗಳನ್ನು ಕತ್ತರಿಸುವ ಜವಾಬ್ದಾರಿ ಜೆಸ್ಕಾಂ ಹಾಗೂ ಮಹಾನಗರ ಪಾಲಿಕೆ ಸಿಬ್ಬಂದಿಗಳ ಮೇಲೆ ಬೀಳುತ್ತಿದ್ದು, ಇದು ಇಲಾಖೆಗಳ ನಡುವೆ ಅನಗತ್ಯ ಕೆಲಸದ ಒತ್ತಡಕ್ಕೆ ಕಾರಣವಾಗುತ್ತಿದೆ. ಸಮಸ್ಯೆ ಕಂಡುಬಂದ ಪ್ರಮುಖ ಪ್ರದೇಶಗಳು ರೈಲ್ವೆ ಸ್ಟೇಷನ್ ರಸ್ತೆಯಿಂದ RTO ಸರ್ಕಲ್ ವರೆಗೆ. RTO ಸರ್ಕಲ್‌ನಿಂದ BRB ಸರ್ಕಲ್ ವರೆಗೆ. ಜಿಲ್ಲಾಧಿಕಾರಿ ಬಂಗ್ಲಾದಿಂದ ಅಸ್ಸಿಹಾಳ್ ಹಾಗೂ ಅಸ್ಸಿಹಾಳ್‌ನಿಂದ ಮಿನಿ ವಿಧಾನಸೌಧದವರೆಗೆ.

ಮಂತ್ರಾಲಯ ಕೆಫೆಯಿಂದ ಹಜರತ್ ಖ್ವಾಜಾ ಬಂದೇನವಾಜ್ ಕಾಲೋನಿ ಮಾರ್ಗವಾಗಿ ಮಿನಿ ವಿಧಾನಸೌಧದವರೆಗೆ. ಬಸವೇಶ್ವರ ಸರ್ಕಲ್‌ನಿಂದ ಶಕ್ತಿನಗರ ಹಾಗೂ ರೈಲ್ವೆ ಸರ್ಕಲ್ ವರೆಗೆ.

ಜಂಟಿ ಯೋಜನೆಗೆ ಆಗ್ರಹ "ಅರಣ್ಯ ಇಲಾಖೆ, ಜೆಸ್ಕಾಂ ಹಾಗೂ ಮಹಾನಗರ ಪಾಲಿಕೆ ಜಂ-ಟಿಯಾಗಿ ಮುಂದಾಲೋಚನೆಯೊಂದಿಗೆ ಸಸಿ ನೆಡುವ ಯೋಜನೆ ರೂಪಿಸಬೇಕು. ಆಗ ಮಾತ್ರ ಸಾರ್ವಜನಿಕರ ತೆರಿಗೆ ಹಣದ ಸದ್ಬಳಕೆಯೊಂದಿಗೆ ರಾಯಚೂರನ್ನು ಸುಂದರ ಹಾಗೂ ಹಸಿರು ನಗರವನ್ನಾಗಿ ರೂಪಿಸಲು ಸಾಧ್ಯ" ಎಂದು ಶಬ್ಬೀರ್ ಅಹ್ಮದ್ ಹೌದಾದಿ ತಿಳಿಸಿದ್ದಾರೆ. ಈ ಮನವಿ ಪತ್ರದ ಪ್ರತಿಗಳನ್ನು ರಾಯಚೂರು ಜಿಲ್ಲಾಧಿಕಾ-ರಿಗಳು, ಮಹಾನಗರ ಪಾಲಿಕೆ ಆಯುಕ್ತರು ಹಾಗೂ ಜೆಸ್ಕಾಂನ ಪ್ರಭಾರಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗಳಿಗೆ ಕೂಡ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ. ಮನವಿ ಸಲ್ಲಿಸುವ ಸಂದರ್ಭದಲ್ಲಿ ಂಋಒಋಒ ಮುಖಂಡರಾದ ಶಹಬಾಜ್ ಖಾನ್, ತನ್ವೀರ್ ಅಹ್ಮದ್, ಮೊಹಮ್ಮದ್ ಸೋಫಿ ಹಾಗೂ ಆಸಿಫ್ ಬಾಬಾ ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೈನ್ ಬಾಬಾ ಜಾಲಹಳ್ಳಿ

## ನೇಮಕಾತಿ ಪ್ರಕಟಣೆ

**ಶಿವಮೊಗ್ಗ ಗ್ರಾಮ ಪಂಚಾಯತ್ ನೇಮಕಾತಿ 2026 ? 14 ಮೇಲ್ವಿಚಾರಕ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜೂನ್ 20, 2026**

**ಶಿವಮೊಗ್ಗ ಗ್ರಾಮ ಪಂಚಾಯತ್ ನೇಮಕಾತಿ 2026: 14 ಮೇಲ್ವಿಚಾರಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಶಿವಮೊಗ್ಗ ಗ್ರಾಮ ಪಂಚಾಯತ್ ಜೂನ್ 2026 ರ ಅಧಿಕೃತ ಅಧಿಸೂಚನೆಯ ಮೂಲಕ ಮೇಲ್ವಿಚಾರಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಶಿವಮೊಗ್ಗ ? ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 08–ಜುಲೈ–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 19–06–2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 08–ಜುಲೈ–2026 ಅಧಿಕೃತ ವೆಬ್‌ಸೈಟ್: shivamogga.nic.in**

## ಪುರಾಣ ಮಹಾ ಮಂಗಲೋತ್ಸವ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಹಿರೂರ ಶ್ರೀ ಅನ್ನದಾನೇಶ್ವರ ಸಂಸ್ಥಾನ ಪಟ್ಟದದೇವರ ಹಿರೇಮಠದಲ್ಲಿ ಮಹಾಶಿವಶರಣೆ ಹೇಮರಡ್ಡಿ ಮಲ್ಲಮ್ಮನವರ ಪುರಾಣ ಪ್ರವಚನ ಮಹಾಮಂಗಲೊತ್ಸವ ನಾಳೆ (ಜೂ.22) ರಂದು ಸೋಮವಾರ ಬೆಳಗಿನ ಜಾವ 04:00 ಘಂಟೆಯಿಂದ ಪ್ರಾರಂಭವಾಗಲಿವೆ.**

ಶತಾಯುಷಿ ಲಿಂ.ಗುರುಶಾಂತವೀರ ಶಿವಾಚಾರ್ಯ ಸ್ವಾಮೀಜಿಯವರ ದಿವ್ಯ ಪ್ರೇರಣೆಯ ಮೇರೆಗೆ ಶ್ರೀ ಮಠದ ಪೀಠಾದಿಪತಿಗಳಾದ ಗುರುಜಯಸಿದ್ದೇಶ್ವರ ಶಿವಾಚಾರ್ಯ ಸ್ವಾಮೀ–ಜಿಯವರ ದಿವ್ಯ ಸಾನಿಧ್ಯದಲ್ಲಿ ಕ್ಷೇತ್ರದ ಕರ್ತೃ ಗುರು ಅನ್ನದಾನೇಶ್ವರರ ಮಹಾಗದ್ದುಗೆಗೆ, ಗುರುಮಠದಲ್ಲಿ ಕಪನೇಶ್ವರ ಮಹಾಗದ್ದುಗೆಗೆ ಹಾಗೂ ಇನ್ನುಳಿದ ಹರಗುರುಚರಮೂರ್ತಿಗಳ ಗದ್ದುಗೆಗಳಿಗೆ ಮಹಾ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಕಳಸಾರತಿ ಮಹಾಮಂಗಲ ಜರುಗುವುದು. ಬೆಳಿಗ್ಗೆ 8.00 ಘಂಟೆಗೆ ಅನ್ನದಾನೇಶ್ವರ ಪಲ್ಲಕ್ಕಿ ಉತ್ಸವ, ಹೇಮರಡ್ಡಿ ಮಲ್ಲಮ್ಮನವರ ಪುರಾಣ ಮೆರವಣಿಗೆಯು ಶ್ರೀ ಮಠದ ಶಿಷ್ಯ ಬಳಗದಿಂದ ಛತ್ರ ಚಾಮರ, 151 ಕುಂಭಗಳೊಂದಿಗೆ, ಡೊಳ್ಳು, ಭಾಜಾ ಭಜಂತ್ರಿ ಸಮೇತ ಸುಕ್ಷೇತ್ರದ ರಾಜ ಬೀದಿಗಳಲ್ಲಿ ಶ್ರೀಮಠದಿಂದ ಮೆರವಣಿಗೆ ಪ್ರಾರಂಭಿಸಲಾಗುವುದು. ತದನಂತರ ಕ್ಷೇತ್ರದ ಹಾಲಬಾವಿಯಿಂದ ಗಂಗಸ್ಥಳ ಪೂಜಾ ವಿಧಿವಿಧಾನಗಳನ್ನು ಪೂರೈಸಿ ರಾಜ ಬೀದಿಗಳಲ್ಲಿ ಮೆರವಣಿಗೆ ನಡೆಯುವುದು. ಮೆರವಣಿಗೆ ಶ್ರೀಮಠ ತಲುಪಿದ ನಂತರ ಶ್ರೀ ಮಠದ ಪ್ರಾಂಗಣದಲ್ಲಿ ಅನ್ನ ದಾನ ಸಂತರ್ಪಣೆ, ಶಕಾರ್ಪಣೆ ಹಾಗೂ ಸರ್ವ ಭಕ್ತರಿಗೆ ಪೂಜ್ಯ–ರಿಂದ ಶುಭ ದರ್ಶನಾಶೀರ್ವಾದ ಜರುಗುವುದು. ರಾತ್ರಿ 9.30 ಘಂಟೆಗೆ ಶಾಂತಮ್ಮ ಇಂಗಳೇಶ್ವರ ಇವರ ತಂಡದಿಂದ ರೇಣುಕಾ ಯಲ್ಲಮ್ಮ ದೇವಿಯ ಬಿಂದಿಗೆಯನ್ನು ಶಿರದ ಮೇಲೆ ಹೊತ್ತು ನೃತ್ಯ ಪ್ರದರ್ಶನ ಕಾರ್ಯಕ್ರಮ ನಡೆಯುವುದು ಎಂದು ಶ್ರೀ ಮಠದ ಪ್ರಕಟಣೆ ತಿಳಿಸಿದೆ.

1ನೇ ಪುಟದಿಂದ....

ಸಂಶೋಧನೆ ಮತ್ತು ತಜ್ಞವೈದ್ಯರ ಲಭ್ಯತೆ ಸಾಧ್ಯವಾಗಿ, ಸಾರ್ವಜನಿಕ ಆರೋಗ್ಯಕ್ಷೇತ್ರದಲ್ಲಿ ಕ್ರಾಂತಿಕಾರಿ ಸುಧಾರಣೆಯಾಗಲಿದೆ," ಎಂದರು.

ಹೋರಾಟದಲ್ಲಿ ಭಾಗವಹಿಸಿದ ಪ್ರಮುಖರುಗಳು ಈ ಬೃಹತ್ ಪ್ರತಿಭಟನಾ ಜಾತದಲ್ಲಿ ವಿವಿಧ ಸಂಘಟನೆಗಳ ಪ್ರಮುಖರು ಹಾಗೂ ಶಿಕ್ಷಣ ಸಂಸ್ಥೆಗಳು ಭಾಗವಹಿಸಿ ಬೆಂಬಲ ಸೂಚಿಸಿದವು. ಪ್ರಮುಖರಾದ ಜಮಾತ್–ಎ–ಇಸ್ಲಾಂ ಸಂಘಟನೆಯ ಅಧ್ಯಕ್ಷ ಬಿ. ಹುಸೇನ್ ಸಾಬ್, ಕನ್ನಡಪರ ಹೋರಾಟಗಾರರಾದ ಸುರೇಶ್ ಗೊಬ್ಬರಕಲ್, ದೌಲತ್ ಸಾಬ್, ಹಿರಿಯ ಪತ್ರಕರ್ತರು ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು, ಜೊತೆಗೆ ಶಿಕ್ಷಣ ಸಂಸ್ಥೆಗಳಾದ ಸನ್‌ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್, ಸನ್‌ರೈಸ್ ನರ್ಸಿಂಗ್ ಕಾಲೇಜು, ರೇಣುಕಾ ನರ್ಸಿಂಗ್ ಕಾಲೇಜು, ಹಾಗೂ ಬಸವಶ್ರೀ ನರ್ಸಿಂಗ್ ಕಾಲೇಜುಗಳ ಪ್ರಾಚಾರ್ಯರು, ಉಪನ್ಯಾಸಕರು, ಸಿಬ್ಬಂದಿ ವರ್ಗ ಮತ್ತು ನೂರಾರು ವಿದ್ಯಾರ್ಥಿಗಳು ಭಾಗಿಯಾಗಿದ್ದರು, ಸಭೆಯ ಕೊನೆಯಲ್ಲಿ, ಕಲ್ಯಾಣ ಕರ್ನಾಟಕ ಭಾಗದ ಜನರ ಜೀವನಾಡಿಯಾಗಿರುವ ರಾಯಚೂರು ಜಿಲ್ಲೆಗೆ ತಕ್ಷಣವೇ ಏಮ್ಸ್ (AIIMS) ಮಂಜೂರು ಮಾಡಬೇಕೆಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಒತ್ತಾಯಿಸುವ ಒಮ್ಮತದ ನಿರ್ಣಯವನ್ನು ಕೈಗೊಳ್ಳಲಾಯಿತು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಪೋಲಿಯೋ ವಿರುದ್ಧದ ವಿಜಯದ ಮುನ್ನಡೆ

## ಜೂನ್ 28 ರಂದು ನಿಮ್ಮ ಐದು ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಹನಿ ಹಾಕಿಸಿ



❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಸಂತಾನೋತ್ಪತ್ತಿ ಮಕ್ಕಳ ಆರೋಗ್ಯ ವಿಭಾಗ ರಾಯಚೂರು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಇವರ ಸಂಯುಕ್ತ ಆಶ್ರಯದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮದ ಕುರಿತು ಮಣ್ಣಿಕೇರಿ ಕ್ಯಾಂಪನಲ್ಲಿ ಜನ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು**

ಕಾರ್ಯಕ್ರಮದ ಕು–ರಿತು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರ ಮಾತನಾಡಿ ಪೋಲಿಯೋ ವೈರಸ್‌ನಿಂದ ಉಂಟಾಗುವ ಈ ರೋಗವು ಮಕ್ಕಳ ನರಮಂಡಲದ ಮೇಲೆ ಪರಿಣಾಮ ಬೀರಿದ್ದು, ಜೀವಿತಾವಧಿಯ ಅಂಗವೈಕಲ್ಯಕ್ಕೆ ಕಾರಣವಾಗಬಹುದು. ಆದ–'ರೆ ಸಮಯಕ್ಕೆ ಸರಿಯಾಗಿ ಪೋಲಿಯೋ ಹನಿ ಹಾಕಿಸುವುದರಿಂದ ಈ ರೋಗವನ್ನು ಪರಿಣಾಮಕಾರಿಯಾಗಿ ತಡೆಗಟ್ಟಬಹುದು. ಮಗು ಈಗಾಗಲೇ ನಿಯಮಿತ ಲಸಿಕೆಗಳನ್ನು ಪಡೆದಿದ್ದರೂ ಸಹ ರಾಷ್ಟ್ರೀಯ ಪೋಲಿಯೋ ಅಭಿಯಾನದ ಅಂಗವಾಗಿ ನೀಡುವ ಹೆಚ್ಚುವರಿ ಪೋಲಿಯೋ ಹನಿಯನ್ನು ತಪ್ಪದೇ ಹಾಕಿಸಬೇಕು ಎಂದು ಆರೋಗ್ಯ ಇಲಾಖೆಯಿಂದ ಮನವಿ ಪ್ರತಿಯೊಬ್ಬ ಪೋಷಕರೂ ತಮ್ಮ ಐದು ವರ್ಷದೊಳಗಿನ ಮಕ್ಕಳನ್ನು ಸಮೀಪದ ಪೋಲಿಯೋ ಕೇಂದ್ರಕ್ಕೆ ಕರೆತಂದು ಎರಡು ಹನಿ ಪೋಲಿಯೋ ಲಸಿಕೆ ಹಾಕಿಸುವ ಮೂಲಕ ಪೋಲಿಯೋ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ತಿಳಿಸಿದರು.

ನಂತರ ಮಾತನಾಡಿದ ಅಂಗನವಾಡಿ ಕಾರ್ಯಕರ್ತರಾದ ಸರಸ್ವತಿ ಅವರು ನಿಮ್ಮ ಆರೋಗ್ಯಕ್ಕಾಗಿ ತಪ್ಪದೇ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಭಾಗವಹಿಸಿ ನಿಮ್ಮ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ತಪ್ಪದೇ ಪೋಲಿಯೋ ಹನಿ ಹಾಕಿಸಿ. ಎರಡು ಹನಿ ಪೋಲಿಯೋ ನಿಮ್ಮ ಮಕ್ಕಳು ಆರೋಗ್ಯದ ಜೀವಾಮೃತ ಸರ್ಕಾರಿ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಅಂಗನವಾಡಿ ಕೇಂದ್ರಗಳು ಬಸ್ಸ್ಟ್ಯಾ ನಿಲ್ದಾಣದಲ್ಲಿ ಹಾಗೂ ವಿಶೇಷ ಪೋಲಿಯೋ ಬೂತ್‌ಗಳಲ್ಲಿ ಪೋಲಿಯೋ ಹನಿ ಹಾಕಲಾಗುವುದು ಪಾಲಕರು ತಮ್ಮ ಮಕ್ಕಳಿಗೆ ತಪ್ಪದೇ ಜೂನ್ 28 ರಂದು ಪೋಲಿಯೋ ಭೂತಕ್ಕೆ ನಿಮ್ಮ ಐದು ವರ್ಷದೊಳಗಿನ ಮಕ್ಕಳನ್ನು ಕರೆತಂದು ಪೋಲಿಯೋ ಹನಿ ಹಾಕಿಸುವುದು ಮರೆಯಬೇಡಿ ಎಂದರು.

ಈ ಸಂದರ್ಭದಲ್ಲಿ ತಾಯಿಂದಿರು ಸಾರ್ವಜನಿಕರು ಹಾಗೂ ಮಕ್ಕಳ ತಾಯಿಂದಿರು ಉಪಸ್ಥಿತರಿದ್ದರು.

# ಅರಕೇರಾ ಪಟ್ಟಣದ ಮಸೀದಿಯಲ್ಲಿ ಮೊಹರಂ ದೇವರ ಬೆಳ್ಳಿ ಮೂರ್ತಿಗಳ ಕಳ್ಳತನ

❑ ನೈಜ್ಯ ದೆಸೆ ನ್ಯೂಸ್

**ಅರಕೇರಾ : ಪಟ್ಟಣದ ಗುಡ್ಡದ ಮೇಲಿರುವ ಐತಿಹಾಸಿಕ ಮಸೀದಿಯಲ್ಲಿ ಮೊಹರಂ ಹಬ್ಬದ ಸಂದರ್ಭದಲ್ಲಿ ಬಳಸುವ ಪವಿತ್ರ ಅಲಾಯಿ ದೇವರುಗಳ ಮೂರ್ತಿಗಳಿರುವ ಪೆಟ್ಟಿಗೆಯಲ್ಲಿರುವ 6 ಕೆಜಿಯಷ್ಟು ಬೆಳ್ಳಿ ಮೂರ್ತಿಗಳು ಹಾಗೂ ಬೆಳ್ಳಿ ಕೊಡೆಗಳು ಕಳ್ಳತನವಾದ ಘಟನೆ ಬೆಳಕಿಗೆ ಬಂದಿದೆ.**



ಅರಕೇರಾ ಪಟ್ಟಣದಲ್ಲಿನ ಹಸೇನ್ – ಹುಸೇನ್ ಮಸೀದಿಯಲ್ಲಿ ಮೊಹರಂ ಹಬ್ಬದ ಆಚರಣೆಗೆ ಅಂಗವಾಗಿ ಮಸೀದಿಯ ಮುಖ್ಯಸ್ಥರು ಹಾಗೂ ಭಕ್ತರು ಸ್ವಚ್ಚತೆ ಕಾರ್ಯ ಹಾಗೂ ಸುಣ್ಣ–ಬಣ್ಣ ಹಚ್ಚಲು ಇಂದು ಗುರುವಾರ ಮುಂದಾಗಿದ್ದಾರೆ. ದೇವರ ಆಭರಣ ಹಾಗೂ ಮೂರ್ತಿಗಳಿರುವ ಪೆಟ್ಟಿಗೆಯ ಬೀಗ ಮು–ರಿದ್ದನ್ನು ಇಲ್ಲಿಯ ಮುಖ್ಯಸ್ಥರು ಗಮನಿಸಿದ್ದಾರೆ. ಆಭರಣಗಳು ಹಾಗೂ ಮೂರ್ತಿಗಳು ಇಲ್ಲದಿರುವುದು ಕಂಡು ದಂಗಾಗಿದ್ದಾರೆ. ಒಟ್ಟು 21 ಮೂರ್ತಿಗಳ ಪೈಕಿ 8 ಮೂರ್ತಿಗಳು ಕಳ್ಳತನವಾಗಿವೆ. ಎರಡು ಬೆಳ್ಳಿದೇವರು,– ಎರಡು ಕಂಚಿನ ಮೂರ್ತಿ 4 ಕಬ್ಬಿಣದ ಮೂರ್ತಿ ಸೇರಿ 2.5 ಕೆಜಿಯಷ್ಟು ತೂಕವಿರುವ 5ಬೆಳ್ಳಿಯ ಕೊಡೆಗಳು(ಛತ್ರಿ) ಕಳ್ಳರು ಕಳ್ಳತನ ಮಾಡಿದಾರೆಂದು ಹೇಳಲಾಗುತ್ತಿದೆ. ಗುಡ್ಡದ ಮೇಲೆ ಜಮಾಹಿಸಿದ ಜನ: ಮೂರ್ತಿ ಕಳವು ಸುದ್ದಿ ತಿಳಿಯುತ್ತಿದ್ದಂತೆ ಮಸೀದಿಯ ಆವರಣದಲ್ಲಿ ಸ್ಥಳೀಯರು ಭಕ್ತರು ಜಮಾಯಿಸಿದ್ದರು. ಇದೀಗ ಆತಂಕದ ವಾತಾವರಣ ನಿರ್ಮಾಣವಾಘಗಿದೆ. ಹಿಂದು ಮುಸ್ಲಿಂ ಭಾವೈಕತೆಯ ಹಬ್ಬಕ್ಕೆ ಹಾಗೂ ಭಕ್ತರು ನಂಬಿಕೆಗೆ ದೊಡ್ಡ ಆಘಾತ ಉಂಟಾಗಿದೆ. ಈವೇಳೆ ಮಸೀದಿಯ ಮುಖ್ಯಯಸ್ಥರಾದ ರಾಜಸಾಬ ಪೂಜಾರಿ, ಖಾಜಣ್ಣಪೂಜಾರಿ, ಖಾಸಿಂಅಲಿ ಮುಖಂಡರುಗಳಾದ ಶೇಖರಪ್ಪಗೌಡಮಾಲಿಪಾಟೀಲ್ ಬಸ್ಸಯ್ಯ ಖಾನಾಪೂರು, ರಾಮಣ್ಣಖಾನಾಪೂರು, ಬೀಮನಗೌಡ, ಶರಣಪ್ಪಖಾನಾಪೂರು, ಬಸ್ಸಣ್ಣ ಗಣೇಕಲ್, ವೆಂಕಟೇಶಸರಗಿನ್ , ಮುದೇಪ್ಪಗೌಡ ಜಟುಮರಡಿ, ವೆಂಕಟೇಶ ಸರಿನ, ಬಸವರಾಜ ತಿಮರಸ್, ವಿಶ್ವನಾಥ ಕಬ್ಬೇರ, ಮಂಜುನಾಥ ಜಾಲಹಳ್ಳಿ ಸೇ–ರಿದಂತೆ ಭಕ್ತಾಧಿಗಳು ಉಪಸ್ಥಿತರಿದ್ದರು.

# ಮಕ್ಕಳ ಆರೋಗ್ಯ ಮತ್ತು ಮಾನಸಿಕ ಸಮತೋಲನಕ್ಕೆ ಯೋಗ ಅಗತ್ಯ: ಡಾ. ಪೂಜಾ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಯೋಗ ಸನ್ನಿಧಿ ಜ್ಞಾನ ವಿದ್ಯಾ ಪೀಠ ಟ್ರಸ್ಟ್, ಕೆಪಿಎಸ್‌ವಿಎಸ್ ಆಯುರ್ವೇದಿಕ್ ಕಾಲೇಜು ಮಾನ್ವಿ ಹಾಗೂ ಲಯನ್ಸ್ ಕ್ಲಬ್‌ಗಳ ಸಂಯುಕ್ತಾಶ್ರಯದಲ್ಲಿ ಸಿಂಧನೂರು ರಸ್ತೆಯ ಧ್ಯಾನ ಮಂದಿರದಲ್ಲಿ ಜೂನ್ 19ರಂದು ಉಚಿತ ಯೋಗಾಸನ ಮತ್ತು ಪ್ರಬಂಧ ಸ್ಪರ್ಧೆಗಳನ್ನು ಆಯೋಜಿಸಲಾಯಿತು.**



ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ರಾಯಚೂರು ಜಿಲ್ಲಾ ಆಯುಷ್ ಆಸ್ಪತ್ರೆಯ ನ್ಯಾಚುರೋಪತಿ ಮತ್ತು ಯೋಗ ವಿಭಾಗದ ಅಧಿಕಾರಿ ಡಾ. ಪೂಜಾ, ಮಕ್ಕಳಲ್ಲಿ ಜ್ಞಾನದ ಜೊತೆಗೆ ನೈತಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಇಂತಹ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದರು. ಯೋಗಗುರು ಅನ್ನದಾನಯ್ಯ ಅವರು ಸ್ವಾರ್ಥವಿಲ್ಲದೆ ಮಕ್ಕಳಿಗಾಗಿ ಇಂತಹ ಸ್ಪರ್ಧೆಗಳನ್ನು ಆಯೋಜಿಸುತ್ತಿದ್ದು, ಜಿಲ್ಲೆಯ ಹಾಗೂ ತಾಲೂಕಿನ ಕೀರ್ತಿಯನ್ನು ಹೆಚ್ಚಿಸುವ ಕಾರ್ಯ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಮಕ್ಕಳ ಆರೋಗ್ಯ ಹಾಗೂ ಮಾನಸಿಕ ಸಮತೋಲನ ಕಾಪಾಡಿಕೊಳ್ಳಲು ಯೋಗ ಅತ್ಯಂತ ಸಹಕಾರಿಯಾಗಿದೆ ಎಂದು ಡಾ. ಪೂಜಾ ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಯೋಗಗುರು ಅನ್ನದಾನಯ್ಯ ಅವರು ಯೋಗ ಚಟುವಟಿಕೆಗಳಿಗೆ ಸಹಕಾರ ನೀಡುತ್ತಿರುವ ಯೋಗ ಬಂಧುಗಳು, ಶಿಕ್ಷಣಾಧಿಕಾರಿ ಚಂದ್ರಶೇಖರ್ ದೊಡ್ಮನಿ ಹಾಗೂ ಕಲ್ಮಠದ ಪೂಜ್ಯರ ಆಶೀರ್ವಾದ ಸದಾ ಇರಲಿ ಎಂದು ಹೇಳಿದರು. ಸ್ಪರ್ಧೆಯ ಕೊನೆಯಲ್ಲಿ ನಿರ್ಣಾಯಕರಾದ ಡಾ. ಪೂಜಾ, ಡಾ. ಅರ್ಪಿತ ಹಾಗೂ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಬಸವಲಿಂಗಪ್ಪ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಲಯನ್ಸ್ ಕ್ಲಬ್ ವತಿಯಿಂದ ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ತಂಪು ಪಾನೀಯ ವಿತ–ರಿಸಲಾಯಿತು. 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಕಾರ್ಯಕ್ರಮದಲ್ಲಿ ಲಯನ್ಸ್ ಕ್ಲಬ್ ಕಾರ್ಯದರ್ಶಿ ಶಾಂತಮೂರ್ತಿ ಬಾವಿಕಟ್ಟಿ, ಶಂಭುಲಿಂಗಯ್ಯ ಸ್ವಾಮಿ, ವೆಂಕಟೇಶ್ ಇಲ್ಲೂರು, ಶಾರದಾಂಬ ಬ್ಯಾಂಕ್ ಸಿಇಒ ರಾಜಕುಮಾರ್, ಕೆಪಿಎಸ್‌ವಿಎಸ್ ಆಯುರ್ವೇದಿಕ್ ಕಾಲೇಜಿನ ಉಪ ಪ್ರಾಚಾರ್ಯ ವಿಶ್ವೇಶ್ವರಯ್ಯ ಮಠ, ಸ್ವಸ್ಥವೃತ್ತ ವಿಭಾಗದ ವೈದ್ಯೆ ಡಾ. ಅರ್ಪಿತ, ವಿವಿಧ ಶಾಲೆಗಳ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತ–ರಿದ್ದರು. ಕಾರ್ಯಕ್ರಮವನ್ನು ಮಾನ್ವಿ ಪಬ್ಲಿಕ್ ಶಾಲೆಯ ನರಸಿಂಹಮೂರ್ತಿ ದೇಸಾಯಿ ನಿರೂಪಿಸಿದರು.

# ರಂಗಭೂಮಿ ಸೇವೆಗೆ ಅಪಾರ ಕೊಡುಗೆ : ಬಿ.ಸಿದ್ದಪ್ಪ ಅಭಿಮತ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ತಾಲೂಕಿನ ಎಮ್ಮಿಗನೂರು ಗ್ರಾಮದಲ್ಲಿರುವ ಸರಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ವಸತಿ ನಿಲಯದ ಆವರಣದಲ್ಲಿ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಶ್ರೀ ಸಿದ್ದೇಶ್ವರ ರಂಗ ಸಂಸ ಕಲ್ಚರಲ್ ಟ್ರಸ್ಟ್ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ವಿಜೃಂಭಣೆಯಿಂದ ಶನಿವಾರ ಜರುಗಿದವು.**



ಕಲಾವಿದ ಬಿ.ಸಿದ್ದಪ್ಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಂಗಭೂಮಿ ನಿರಂತರವಾಗಿ ಕಾರ್ಯಗತಗೊಳಿಸಲು ಮತ್ತು ಗ್ರಾಮೀಣ ಭಾಗದಲ್ಲಿ ಸಾಂಸ್ಕೃತಿಕ ಕಲೆಗಳನ್ನು ಬೆಳೆಸುವಲ್ಲಿ ಹೇಮೇಶ್ವರರವರ ಪಾತ್ರ ಅತಿ ಮುಖ್ಯವಾಗಿದೆ. ಯಾವಾಗಲೂ ಗ್ರಾಮೀಣ ಭಾಗದ ಜನಪದ, ತತ್ವಪದಗಳು, ಭಾವಗೀತೆಗಳು, ಲಾವಣಿ ಪದಗಳು, ಬಯಲಾಟ, ನಾಟಕ, ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳನ್ನು ಉಳಿಸಿ ಬೆಳೆಸುವ ಕೆಲಸ ಮಾಡುತ್ತಿದ್ದಾರೆ. ಯೋಗದಿಂದ ರೋಗ ಮುಕ್ತಿ ಎಲ್ಲರೂ ಪ್ರತಿದಿನ ಯೋಗ, ಧ್ಯಾನ ಕೈಗೊಳ್ಳಬೇಕು. ಅಂದಾಗ ಮಾತ್ರ ಸಮೃದ್ಧ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ ಎಂದರು.

ಕಲಾವಿದ ಜಿ.ಪಾಂಡುರಂಗ ಮಾತನಾಡಿ, ಇಂದಿನ ದಿನಗಳಲ್ಲಿ ಮಕ್ಕಳು ಕಲೆಗಳು ಪರಿಚಯ ಇಲ್ಲದೆ ಇರುವುದು ವಿಪರ್ಯಾಸವಾಗಿದೆ. ಅದಕ್ಕಾಗಿ ಗ್ರಾಮೀಣ ಭಾಗದಲ್ಲಿ ಇಂತಹ ಕಲೆಗಳನ್ನು ಬೆಳಿಸುವ ಕೆಲಸಕ್ಕೆ ಪ್ರತಿಯೊಬ್ಬರ ಸರಕಾರ ಅಗತ್ಯವಾಗಿದೆ ಎಂದರು. ಸಾಂಸ್ಕೃತಿಕ ಸದಾಶಿವ ಗೌಡ.ಬಿ ಮತ್ತು ತಂಡದವರು ಸಾಂಸ್ಕೃತಿಕ ಕಾರ್ಯಕ್ರಮಗಳು, ಕಗ್ಗಲ್ ಲೋಕಣ್ಣ ಮತ್ತು ತಂಡದವರು ಯೋಗ ನೃತ್ಯ, ಹೆಚ್.ಲೋಕರಾಜ್ ಮತ್ತು ತಂಡದವರು ಸಮೂಹ ನೃತ್ಯ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ವೈದ್ಯರಾದ ಡಾ.ಬಸವರಾಜ, ಡಾ.ಪ್ರಹ್ಲಾದ್ ಆರ್.ಐಲಿ, ಸರಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದ ಕಿರಿಯ ಮೇಲ್ವಿಚಾರಕ ಮಾರೇಶ, ಸಮಾಜ ಸೇವಕ ಹೆಚ್.ಪೀರಾವಲಿ, ಕಲಾವಿದರಾದ ಡಿ.ಜಡೀಯಪ್ಪ, ಶರಣ, ಸ್ವಾಮಯ್ಯ, ಬೆಳಗೋಡು ತಿಪ್ಪೇಶ, ಶಂಕರಪ್ಪ, ಚಾನಾಳ ಈರಣ್ಣ, ಬಸವ, ಹಳೆಮನೆ ವಿರೇಶ, ಪಕ್ಕೀರಪ್ಪ, ಜಡೇಶ, ಸಾಧಕಲಿ, ಹೊನ್ನುರಸಾಬ್, ಸಿದ್ದೇಶ್ವರ ರಂಗ ಸಂಸ ಕಲ್ಚರಲ್ ಟ್ರಸ್ಟ್ ಅಧ್ಯಕ್ಷ ಶ್ರೀ ಗುರುಮಹಾಂತೇಶ, ಕಾರ್ಯದರ್ಶಿ ಕುರುಬರ ಹೇಮೇಶ್ವರ, ಖಜಾಂಚಿ ಕೆ.ಹಿಮಂತರಾಜ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

# ಸತತ ಪ್ರಯತ್ನ ಮತ್ತು ನಿರಂತರ ಅಭ್ಯಾಸದಿಂದ ಯಶಸ್ಸು ಸಾಧ್ಯ: ಶಂಕ್ರಪ್ಪ ನಕ್ಕುಂದಿ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಡಾ. ಬಿ. ಆರ್. ಅಂಬೇಡ್ಕರ್ ವಿದ್ಯಾರ್ಥಿ ವಸತಿ ನಿಲಯದಲ್ಲಿ ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬಿಳ್ಕೊಡುಗೆ ಸಮಾರಂಭ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**




ಈ ಕಾರ್ಯಕ್ರಮವನ್ನು ಉದ್ಘಾಟಿಸಿ ವಿಶೇಷ ಉಪನ್ಯಾಸಕರಾಗಿ ಭಾಗವಹಿಸಿ ಶಂಕ್ರಪ್ಪ ನಕ್ಕುಂದಿ ಮಾತನಾಡಿ ವಸತಿ ನಿಯಲ ಎನ್ನುವುದು ಎರಡನೆಯ ಮನೆ ಇದ್ದಂತೆ ವಸತಿ ನಿಲಯವನ್ನು ಸ್ವಚ್ಛತೆ ಇಂದ ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ವಿದ್ಯಾರ್ಥಿಗಳ ಜವಾಬ್ದಾರಿಯಾಗಿದೆ.ವಿದ್ಯಾರ್ಥಿಗಳು ಸಮಾಜದ ಅಂಕುಡೊಂಕುಗಳಿಗೆ, ಚುಚ್ಚು ಮಾತುಗಳಿಗೆ ಕಿವಿಗೊಡದೆ ತಮ್ಮ ನಿರ್ದಿಷ್ಟ ಗು–ರಿಗಳತ್ತ ಮುನ್ನುಗ್ಗಬೇಕು ಅಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಗಳು ಸತತ ಪ್ರಯತ್ನ ನಿರಂತರ ಅಭ್ಯಾಸದ ಕಡೆ ಗಮನಹರಿಸಬೇಕೆಂದು ತಿಳಿಸಿದರು. ಸರಕಾರದ ಪ್ರತಿಯೊಂದು ಯೋಜನೆಗಳನ್ನು ಸದುಪಯೋಗವನ್ನು ಪಡೆದುಕೊಂಡು ವಿದ್ಯಾರ್ಥಿಗಳು ಸರಕಾರಿ ಹುದ್ದೆಯನ್ನು ಪಡೆಯುವ ನಿಟ್ಟಿನಲ್ಲಿ ಪ್ರಯತ್ನಿಸಿದಾಗ ಮಾತ್ರ ತಂದೆ ತಾಯಿಯ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಂತಾಗುತ್ತದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಆಂಜನೇಯ ನಾಯಕ ನಸಲಾಪುರ ಮಾತನಾಡಿ ಬೀಳ್ಕೊಡುಗೆ ಸಮಾರಂಭ ಕಾರ್ಯಕ್ರಮ ಎನ್ನುವುದು ಒಂದು ಔಪಚಾರಿಕ ಕಾರ್ಯಕ್ರಮ ವಿದ್ಯಾರ್ಥಿಗಳು ವಸತಿ ನಿಲಯದಲ್ಲಿ ಇಷ್ಟು ದಿನಗಳ ಕಾಲ ಕಳೆದ ಸವಿನೆನಪುಗಳನ್ನು ಮೆಲಕು ಹಾಕಿ ಮುಂದಿನ ಭವಿಷ್ಯವನ್ನು ಕಟ್ಟಿಕೊಳ್ಳುವುದಕ್ಕೆ ಇಂದಿನಿಂದ ಹೊಸ ಯುಗ ಆರಂಭವಾವಾಗಿದೆ,ನಿಮ್ಮ ಕನಸನ್ನ ನನಸು ಮಾಡಿಕೊಳ್ಳುವುದಕ್ಕೆ ಸಿದ್ಧರಾಗಬೇಕು.ವಿದ್ಯಾರ್ಥಿಗಳು ತಮ್ಮ ತಂದೆ ತಾಯಿಗಳ ಕಷ್ಟಗಳನ್ನು ಅರ್ಥ ಮಾಡಿಕೊಂಡು ಓದಿನ ಕಡೆ ಹೆಚ್ಚು ಗಮನ ನೀಡಬೇಕು.

ವಿದ್ಯಾರ್ಥಿಗಳು ಯಾವುದೇ ದುಃಶ್ಚಟಗಳಿಗೆ ಬಲಿಯಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳಬಾರದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಅಲ್ಲದೇ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಮಾಡಿಕೊಂಡು ಸರ್ಕಾರಿ ಹುದ್ದೆಯನ್ನು ಪಡೆಯುವ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕು. ಪ್ರಯತ್ನ ಎಂಬ ಚಂದಿರನನ್ನು ಬೆಳಗಿದರೆ ಯಶಸ್ಸು ಎಂಬ ಬೆಳದಿಂಗಳು ಸಿಗತ್ತದೆ.

ಯಶಸ್ಸನ್ನು ಪಡೆದುಕೊಳ್ಳಲು ಪ್ರಯತ್ನಿಸಿ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ವಸತಿ ನಿಲಯದ ಮೇಲ್ವಿಚಾರಕರಾದ ಹುಸೇನ್ ಬಡಿಗೇರ ಇವರು ಪ್ರಾಸ್ತವಿಕ ನುಡಿಯನ್ನು ಮಾತನಾಡಿ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳ ಜೊತೆ ಜೊತೆಯಾಗಿ ನಡೆದುಕೊಂಡು ವಿದ್ಯಾರ್ಥಿಗಳ ಕಷ್ಟಕ್ಕೆ ಸ್ಪಂದಿಸುವ ಕೆಲಸವನ್ನು ಮಾಡಿ ಕೊಂಡು ಬಂದಿದ್ದೇನೆ ಎಂದು ಹೇಳಿದರು. ಪ್ರತಿಯೊಬ್ಬ ವಿದ್ಯಾರ್ಥಿಗಳು ಸರಕಾರಿ ನೌಕರಿಯನ್ನು ಪಡೆದುಕೊಂಡಾಗ ಸಾಥ–'ರ್ಕವಾಗುತ್ತದೆ ಎಂದು ಹೇಳಿದರು.ಪ್ರತಿಯೊಬ್ಬ ವಿದ್ಯಾರ್ಥಿಗಳ ಮುಂದಿನ ಜೀವನ ಸುಖಕರವಾಗಿರಲಿ. ಮುಂದಿನ ವಿದ್ಯಾಭ್ಯಾಸದ ಜೀವನ ಉಜ್ವಲವಾಗಿರಲಿ ಎಂದು ಶುಭ ಹಾರೈಸಿದರು.

ಪರಿಶಿಷ್ಟ ವರ್ಗಗಳ ಸಮಾಜ ಕಲ್ಯಾಣಾಧಿಕಾರಿಗಳಾದ ಕೆ. ವಿಜಯ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ ಪ್ರತಿ ವರ್ಷ ಬೀಳ್ಕೊಡುಗೆ ಸಮಾರಂಭ ಕಾರ್ಯಕ್ರಮವನ್ನು ಮಾಡುತ್ತೀರುವುದು ಸಂತೋಷದ ಕ್ಷಣವಾಗಿದೆ ಎಂದು ಹೇಳಿದರು. ಜಗತ್ತಿನಲ್ಲಿ ಬದುಕಬೇಕಾದರೆ ಪ್ರಯೋಜನಕಾ–ರಿಯಾಗಿ ಬದುಕಿದಾಗ ಸಾರ್ಥಕವಾಗುತ್ತದೆ, ಪ್ರತಿಯೊಬ್ಬ ವಿದ್ಯಾರ್ಥಿಗಳು ಡಾ. ಬಿ. ಆರ್ ಅಂಬೇಡ್ಕರ ಅವರಂತೆ ಬದುಕಬೇಕು. ನನ್ನ ಜನ ಸಮಾಜದಲ್ಲಿ ಜವಾಬ್ದಾರಿಯುತವಾಗಿ ಜೀವನವನ್ನು ಕಟ್ಟಿಕೊಂಡು ಸಾಗಿದಾಗ ಅವರ ಕನಸು ನನಸಾಗಲು ಸಾಧ್ಯವಾಗುತ್ತದೆ ಎಂದು ಹೇಳಿದರು.ವಿದ್ಯಾರ್ಥಿಗಳು ಉತ್ತಮವಾಗಿ ಅಭ್ಯಾಸ ಮಾಡಿ ಮುಂದಿನ ಜೀವನ ಸುಖರವಾಗಿ ಸಾಗಲಿ ಎಂದು ಹಾರೈಸಿದರು.

ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಾದ ಉದಯ, ಅಂಜಿನೇಯ್ಯ ಮಾತನಾಡಿ ಹಾಸ್ಟೆಲ್ ಅಲ್ಲಿ ಕಳೆದ ಜೀವನದ ಸವಿನೆನಪುಗಳನ್ನ ಹಂಚಿಕೊಂಡು ಅನಿಸಿಕೆಗಳನ್ನು ಹಂಚಿಕೊಂಡರು.ಕಾರ್ಯಕ್ರಮದಲ್ಲಿ ವಸತಿ ನಿಲಯದ ಮೇಲ್ವಿಚಾರಕರಾದ ಶ್ರೀನಿವಾಸ, ಯಲ್ಲಾಲಿಂಗ, ಸುಂದರಾಜ್,ಅಡುಗೆ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರ ಮದ ನಿರೂಪಣೆಯನ್ನು ರಾಹುಲ್ ವಿದ್ಯಾರ್ಥಿ ನೆರವೇರಿಸಿಕೊಟ್ಟರು ದುರ್ಗೇಶ್ ಪ್ರಾರ್ಥನೆ ಗೀತೆಯನ್ನು ಹಾಡಿದರು.ಸಂಗಮೇಶ ಸ್ವಾಗತಿಸಿದರು.ದೇವರಾಜ್ ವಂದಿಸಿದರು .

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಎಲೆಕ್ಟ್ರೋಪ್ಲೇಟರ್


ಎಲೆಕ್ಟ್ರೋಪ್ಲೇಟರ್ (Electroplater) ಟ್ರೇಡ್‌ನ ಎರಡು ವರ್ಷಗಳ ತರಬೇತಿ ಅವಧಿಯಲ್ಲಿ, ಅಭ್ಯರ್ಥಿಗೆ ಉದ್ಯೋಗದ ಪಾತ್ರಕ್ಕೆ ಸಂಬಂಧಿಸಿದ ವೃತ್ತಿಪರ ಕೌಶಲ್ಯ (Professional Skill), ವೃತ್ತಿಪರ ಜ್ಞಾನ (Professional Knowledge) ಹಾಗೂ ಉದ್ಯೋಗಾರ್ಹತಾ ಕೌಶಲ್ಯಗಳು (Employability Skills) ಕುರಿತು ಸಮಗ್ರ ತರಬೇತಿ ನೀಡಲಾಗುತ್ತದೆ. ಇದರ ಜೊತೆಗೆ, ಅಭ್ಯರ್ಥಿಯ ಆತ್ಮವಿಶ್ವಾಸ, ಕಾರ್ಯನೈಪುಣ್ಯ ಮತ್ತು ಸಮಸ್ಯೆ ಪರಿಹಾರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಯೋಜನಾ ಕಾರ್ಯಗಳು (Project Work) ಹಾಗೂ ಪಠ್ಯೇತರ ಚಟುವಟಿಕೆಗಳು (Extra-Curricular Activities) ಕೈಗೊಳ್ಳುವಂತೆ ಪ್ರೋತ್ಸಾಹಿಸಲಾಗುತ್ತದೆ. ವಿದ್ಯಾರ್ಹತೆ ೧೦ ನೇ ತರಗತಿ ಉತ್ತೀರ್ಣ ವೃತ್ತಿಪರ ಕೌಶಲ್ಯ ವಿಷಯದ ಅಡಿಯಲ್ಲಿ ಒಳಗೊಂಡಿರುವ ಪ್ರಮುಖ ಅಂಶಗಳು ಕೆಳಗಿನಂತಿವೆ: ಎಲೆಕ್ಟ್ರೋಪ್ಲೇಟಿಂಗ್‌ನ ಮೂಲಭೂತ ತತ್ವಗಳು ಮತ್ತು ವಿಧಾನಗಳು ಲೋಹಗಳ ಮೇಲ್ಮೈ ಸಿದ್ಧತೆ ಮತ್ತು ಸ್ವಚ್ಛಗೊಳಿಸುವಿಕೆ ವಿವಿಧ ಲೋಹಗಳ ಮೇಲೆ ಲೇಪನ (Plating) ತಂತ್ರಗಳು ರಾಸಾಯನಿಕ ದ್ರಾವಣಗಳ ತಯಾರಿ ಮತ್ತು ಬಳಕೆ ಪ್ಲೇಟಿಂಗ್ ಉಪಕರಣಗಳು ಹಾಗೂ ಯಂತ್ರಗಳ ನಿರ್ವಹಣೆ ಗುಣಮಟ್ಟ ಪರಿಶೀಲನೆ ಮತ್ತು ದೋಷ ಪತ್ತೆ ಸುರಕ್ಷತಾ ಕ್ರಮಗಳು ಮತ್ತು ಕೈಗಾರಿಕಾ ನಿಯಮಗಳು ತ್ಯಾಜ್ಯ ನಿರ್ವಹಣೆ ಮತ್ತು ಪರಿಸರ ಸಂರಕ್ಷಣೆ ಈ ತರಬೇತಿ ಮೂಲಕ ಅಭ್ಯರ್ಥಿಗಳು ಎಲೆಕ್ಟ್ರೋಪ್ಲೇಟಿಂಗ್ ಕ್ಷೇತ್ರದಲ್ಲಿ ತಾಂತ್ರಿಕ ಜ್ಞಾನ ಪಡೆದು ಕೈಗಾರಿಕೆಗಳಲ್ಲಿ ಉದ್ಯೋಗ ಪಡೆಯಲು ಸಿದ್ಧರಾಗುತ್ತಾರೆ.

## ಶ್ರೀ ಶ್ರೀ ಶ್ರೀ ಬೋಳಬಂಡಿ ತಿಮ್ಮಪ್ಪ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ರಮದಲ್ಲಿ ಭಾಗಿಯಾದ ಅಯ್ಯಪ್ಪ ಗೌಡ ಗಬ್ಬೂರು

ನೈಜ್ಯ ದೆಸೆ ನ್ಯೂಸ್

ರಾಯಚೂರು: ತಾಲೂಕಿನ ವಡವಾಟಿ?ಬೋಳಮನದೊಡ್ಡಿ ವ್ಯಾಪ್ತಿಯಲ್ಲಿರುವ ಶ್ರೀ ಶ್ರೀ ಶ್ರೀ ಬೋಳಬಂಡಿ ತಿಮ್ಮಪ್ಪ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ, ನೂತನ ಮೂರ್ತಿ ಪ್ರತಿಷ್ಠಾಪನೆ ಹಾಗೂ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವು ಭಕ್ತಿಭಾವದಿಂದ ನೆರವೇರಿತು.

ಈ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಕಾರ್ಮಿಕ ವಿಭಾಗದ



ರಾಜ್ಯ ಕಾರ್ಯದರ್ಶಿಗಳಾದ ಅಯ್ಯಪ್ಪ ಗೌಡ ಗಬ್ಬೂರು ಭಾಗವಹಿಸಿ, ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಸಮಸ್ತ ಜನತೆಗೆ ಸುಖ, ಶಾಂತಿ, ನೆಮ್ಮದಿ, ಅಷ್ಟೈಶ್ವರ್ಯ ಹಾಗೂ ಅಭಿವೃದ್ಧಿ ದೊರೆಯಲಿ ಎಂದು ಪ್ರಾರ್ಥಿಸಿ ದೇವರ ಕೃಪೆಗೆ ಪಾತ್ರರಾದರು.
=ಈ ಸಂದರ್ಭದಲ್ಲಿ ಕುರುಬದೊಡ್ಡಿಯ ನರಸಿಂಹಲು, ಮೋನಪ್ಪ ಬಡಿಗೇರ, ಬಿ.ಜಿ. ಆಂಜನೇಯ ಬೋಡಗಟ್ಟು, ಮೌನೇಶ್ ಬಡಿಗೇರ, ಮಹಾದೇವ ಗಾಲಯ್ಯ, ಸೂರಿ ಸೇರಿದಂತೆ ಹಲವಾರು ಗಣ್ಯರು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.
ವರದಿ: ಖಾಜಾ ಹುಸೇನ್ ಬಾಬಾ ಜಾಲಹಳ್ಳಿ

## ಸಸಿಗಳನ್ನು ನೆಟ್ಟು ನೀರೆರೆಯುವ ಮೂಲಕ ರಾಹುಲ್ ಗಾಂಧಿ ಜನ್ಮದಿನಾಚರಣೆ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಪಟ್ಟಣದ ಕೊಟ್ಟಾಲ್ ರಸ್ತೆಯ ಚಂದ್ರಕಲಾ ಚಿತ್ರಮಂದಿರ ಎದುರುಗಡೆಯ ಮಾರೆಣ್ಣ ಹೋಟಲ್ ಬಳಿಯಲ್ಲಿ ರಾಜ್ಯ ಯುವ ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಸಂಯೋಜಕ ಆರ್.ಪಿ.ಶಶಿಕುಮಾರ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ ನಾಯಕ ಮತ್ತು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಜನ್ಮದಿನದ ಅಂಗವಾಗಿ ಶನಿವಾರ ಸಸಿಗಳನ್ನು ನೆಟ್ಟು ನೀರೆರೆಯುವ ಮೂಲಕ ಹುಟ್ಟು ಹಬ್ಬವನ್ನ ಅದ್ದೂರಿಯಾಗಿ ಆಚರಿಸಲಾಯಿತು.



ನಂತರ ಆರ್.ಪಿ.ಶಶಿಕುಮಾರ ಮಾತನಾಡಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ಇಡೀ ದೇಶಕ್ಕೆ ಸಾಕಷ್ಟು ಕೊಡುಗೆಗಳನ್ನು ನೀಡುವ ಜೊತೆಗೆ ದೇಶದ ಜನರ ಸೇವೆಗೆ ಕಂಕಣ ಬದ್ಧರಾಗಿ ಕೆಲಸ ಮಾಡುತ್ತಿದ್ದಾರೆ. ಇಂತಹ ನಾಯಕರ ಮಾರ್ಗದರ್ಶನದಲ್ಲಿ ಮತ್ತು ಅವರ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು ಜನರ ಸೇವೆಗೆ ಮುಂದಾಗುತ್ತೇವೆ ಎಂದರು.
ಈ ಸಂದ್ರಭದಲ್ಲಿ ಕಂಪ್ಲಿ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಕೆ.ಶ್ರೀನಿವಾಸರಾವ್, ಕೆ.ಷಣ್ಮುಖಪ್ಪ, ಎನ್.ಹಬೀಬ್ ರೆಹಮಾನ್, ಕೆ.ಎಸ್.ಚಾಂದ್ ಬಾಷಾ, ಉಸ್ಮಾನ್, ಬಿ.ಸಿದ್ದಪ್ಪ, ಸುರೇಶ್‌ಗೌಡ, ವಿರುಪಾಕ್ಷಿ, ರಾಘು, ಅಕ್ಕಿ ಜಿಲಾನ್ ಸುಧಾಕರ್, ಜಾಫರ್, ಆಟೋ ರಘು, ಎಂ.ರಾಜಭಕ್ಷಿ, ಗೋಪಿ, ಉಮೇಶ್ ಗೌಡ, ಗೌಡ್ರು ಸಿದಪ್ಪ, ಶಿವಕುಮಾರ್ ಸೇರಿದಂತೆ ಮುಖಂಡರು, ಕಾರ್ಯಕರ್ತರು ಇದ್ದರು.

## ಸನ್ ರೈಸ್ ಕಾಲೇಜಿನ ಶನಿವಾರದ ವಿಶೇಷ ಉಪನ್ಯಾಸ ನೀಡಿದ ಡಾ. ಅಮರ್ ಪಾಟೀಲ್

# ಅನಿಮಿಯಾ ಸಮಸ್ಯೆ ನಿವಾರಣೆಯಲ್ಲಿ ನರ್ಸಿಂಗ್ ಸಿಬ್ಬಂದಿಯ ಪಾತ್ರ ಮಹತ್ವದ್ದು

ನೈಜ್ಯ ದೆಸೆ ನ್ಯೂಸ್












ಸಿಂಧನೂರು: ಸನ್ ರೈಸ್ ಡಿ-ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾಮೆಡಿಕಲ್ ಕಾಲೇಜು ಸಿಂಧನೂರು ವತಿಯಿಂದ ಪ್ರತೀ ಶನಿವಾರದಂತೆ ಆಯೋಜಿಸಲಾಗುವ ಶನಿವಾರದ ವಿಶೇಷ ಶೈಕ್ಷಣಿಕ ಉಪನ್ಯಾಸ ಕಾರ್ಯಕ್ರಮದ ಅಂಗವಾಗಿ, ದಿನಾಂಕ 20 ಜೂನ್ 2026ರಂದು ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ "ಅನಿಮಿಯಾ (ರಕ್ತಹೀನತೆ) ಹಾಗೂ ನರ್ಸಿಂಗ್ ನಿರ್ವಹಣೆ" ಎಂಬ ಮಹತ್ವದ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಯುಷ್ ಆಸ್ಪತ್ರೆ, ಸಿಂಧನೂರಿನ ಖ್ಯಾತ ವೈದ್ಯ ತಜ್ಞರಾದ ಡಾ. ಅಮರ್ ಪಾಟೀಲ್ (ಒಃಃಖ, ಒಆ ಉಜಟಿಜಡಿಚಿಟ ಒಜಜುಛಿಟಿಜ, ಈಒಉಇ) ಅವರು ಆಗಮಿಸಿ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಮಾಹಿತಿಯನ್ನು ಹಂಚಿಕೊಂಡರು. ತಮ್ಮ ಉಪನ್ಯಾಸದಲ್ಲಿ ಅನಿಮಿಯಾ ಎಂದರೇನು, ಅದರ ಪ್ರಮುಖ ಕಾರಣಗಳು, ಲಕ್ಷಣಗಳು, ತಡೆಗಟ್ಟುವ ವಿಧಾನಗಳು, ಸೂಕ್ತ ಆಹಾರ ಪದ್ಧತಿ, ಚಿಕಿತ್ಸಾ ಕ್ರಮಗಳು ಹಾಗೂ ರೋಗಿಯ ಆರೈಕೆಯಲ್ಲಿ ನರ್ಸಿಂಗ್ ಸಿಬ್ಬಂದಿಯ ಜವಾಬ್ದಾರಿಗಳ ಕುರಿತು ಸವಿಸ್ತಾರವಾಗಿ ವಿವರಿಸಿದರು.

ಇಂದಿನ ಸಮಾಜದಲ್ಲಿ ರಕ್ತಹೀನತೆ ಒಂದು ಸಾಮಾನ್ಯ ಆರೋಗ್ಯ ಸಮಸ್ಯೆಯಾಗಿದ್ದು, ವಿಶೇಷವಾಗಿ ಮಹಿಳೆಯರು, ಮಕ್ಕಳು ಹಾಗೂ ಗರ್ಭಿಣಿಯರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ಸಮಸ್ಯೆಯನ್ನು ಸಮಯಕ್ಕೆ ಸರಿಯಾಗಿ ಗುರುತಿಸಿ ಚಿಕಿತ್ಸೆ ನೀಡುವುದರಲ್ಲಿ ನರ್ಸಿಂಗ್ ವೃತ್ತಿಪರರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಅವರು ತಿಳಿಸಿದರು.ರೋಗಿಗಳೊಂದಿಗೆ ಮಾನವೀಯತೆ, ಸೇವಾ ಮನೋಭಾವ ಹಾಗೂ ವೃತ್ತಿಪರ ನೈಪುಣ್ಯದಿಂದ ಕಾರ್ಯನಿರ್ವಹಿಸುವ ಮೂಲಕ ಉತ್ತಮ ಆರೋಗ್ಯ ಸೇವೆಯನ್ನು ನೀಡಬಹುದೆಂದು ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಸಂದೇಶ ನೀಡಿದರು.

ನರ್ಸಿಂಗ್ ಕ್ಷೇತ್ರವು ಕೇವಲ ಉದ್ಯೋಗವಲ್ಲ, ಅದು ಮಾನವ ಸೇವೆಯ ಮಹತ್ತರ ಸಾಧನವಾಗಿದೆ.ವಿದ್ಯಾರ್ಥಿಗಳು ತಮ್ಮ ಅಧ್ಯಯನದ ಜೊತೆಗೆ ಕೌಶಲ್ಯ, ಶಿಸ್ತು, ಸಮಯಪ್ರಜ್ಞೆ ಮತ್ತು ಸೇವಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಅವರ ಉಪನ್ಯಾಸ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವುದರ ಜೊತೆಗೆ ನರ್ಸಿಂಗ್ ವೃತ್ತಿಯ ಮಹತ್ವದ ಕುರಿತು ಹೆಚ್ಚಿನ ಅರಿವು ಮೂಡಿಸಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾದ ಆಸಿಫ್ ಅವರು ಮಾತನಾಡಿ, ಪ್ರತೀ ಶನಿವಾರ ಆಯೋಜಿಸಲಾಗುವ ವಿಶೇಷ ಉಪನ್ಯಾಸ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ವೃತ್ತಿಪರ ಬೆಳವಣಿಗೆಗೆ ಸಹಕಾರಿಯಾಗುತ್ತಿವೆ ಎಂದು ಹೇಳಿದರು. ಇಂದಿನ ಕಾರ್ಯಕ್ರಮದಲ್ಲಿ ಅನಿಮಿಯಾ ಹಾಗೂ ನರ್ಸಿಂಗ್ ನಿರ್ವಹಣೆ ಕುರಿತಂತೆ ಅತ್ಯಂತ ಸಮಗ್ರ ಹಾಗೂ ಉಪಯುಕ್ತ ಮಾಹಿತಿಯನ್ನು ನೀಡಿದ ಡಾ. ಅಮರ್ ಪಾಟೀಲ್ ಅವರಿಗೆ ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ, ಕಾರ್ಯದರ್ಶಿಗಳಾದ ಇರ್ಷಾದ್ ಕೆ, ವಿವಿಧ ವಿಭಾಗಗಳ ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ನರ್ಸಿಂಗ್ ವಿದ್ಯಾರ್ಥಿಗಳು ಉಪಸ್ಥಿತರಿದ್ದು, ಉಪನ್ಯಾಸದ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಂಡರು.ಕೊನೆಯಲ್ಲಿ ವಿದ್ಯಾರ್ಥಿಗಳು ತಮ್ಮ ಸಂದೇಹಗಳಿಗೆ ವೈದ್ಯರಿಂದ ಉತ್ತರಗಳನ್ನು ಪಡೆದು ಕಾರ್ಯಕ್ರಮ ಯಶಸ್ವಿಯಾಗಿ ಮುಕ್ತಾಯಗೊಂಡಿತು.

# ಪೂರ್ವ ಪ್ರಾಥಮಿಕ ಅತಿಥಿ ಶಿಕ್ಷಕರು, ಆಯಾಗಳ ನೇಮಕಕ್ಕೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕೆಕೆಆರ್ಡಿಬಿ ಅಕ್ಷರ ಆವಿಷ್ಕಾರ ಯೋಜನೆಯಡಿ ನಡೆಯುತ್ತಿರುವ ಪೂರ್ವ ಪ್ರಾಥ-'ಮಿಕ (ಇಸಿಸಿಇ) ತರಗತಿಗಳಿಗೆ ಅತಿಥಿ ಶಿಕ್ಷಕರು ಹಾಗೂ ಆಯಾಗಳನ್ನು ಕೂಡಲೇ ನೇಮಕಾತಿ ಮಾಡಿಕೊಳ್ಳುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಅಧೀಕ್ಷಕರು ಮತ್ತು ಶಿಕ್ಷಣ ಸಂಯೋಜಕರಿಗೆ ಮನವಿ ಸಲ್ಲಿಸಲಾಯಿತು.**




ಶಾಲೆಗಳು ಆರಂಭವಾಗಿ 20 ದಿನಗಳು ಕಳೆದರೂ ಸಹ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಅತಿಥಿ ಶಿಕ್ಷಕರು ಮತ್ತು ಆಯಾಗಳನ್ನು ನೇಮಕ ಮಾಡದೇ ವಿಳಂಬ ಮಾಡಲಾಗುತ್ತಿದೆ ಎಂದು ಮನವಿಯಲ್ಲಿ ಆರೋಪಿಸಲಾಗಿದೆ. ಶಿಕ್ಷಕರು ಹಾಗೂ ಆಯಾಗಳ ಕೊರತೆಯಿಂದ ಮಕ್ಕಳ ಕಲಿಕೆ ಮತ್ತು ಪೋಷಣೆಗೆ ಅಡಚಣೆ ಉಂಟಾಗಿದ್ದು, ಪೋಷಕರಲ್ಲಿ ಆತಂಕ ಹೆಚ್ಚಾಗಿದೆ. ಜೊತೆಗೆ, ಈ ಯೋಜನೆ ಮುಂದುವರಿಯುತ್ತದೆಯೇ ಎಂಬ ಅನುಮಾನವೂ ಮೂಡಿದೆ ಎಂದು ತಿಳಿಸಲಾಯಿತು.

ಈಗಾಗಲೇ ಲಿಂಗಸುಗೂರು ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪೂರ್ವ ಪ್ರಾಥಮಿಕ ಅತಿಥಿ ಶಿಕ್ಷಕರು ಮತ್ತು ಆಯಾಗಳ ನೇಮಕಕ್ಕೆ ಆದೇಶ ಹೊರಡಿಸಿದ್ದಾರೆ. ಆದ-'ರೆ ರಾಯಚೂರು ತಾಲೂಕಿನಲ್ಲಿ ಇನ್ನೂ ಆದೇಶ ಹೊರಡಿಸದಿರುವುದು ಒಂದೇ ಜಿಲ್ಲೆಯಲ್ಲಿ ವ್ಯತ್ಯಾಸ ಕಂಡುಬರುವಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅಲ್ಲದೆ, ಕಳೆದ ವರ್ಷ ಸೇವೆ ಸಲ್ಲಿಸಿದ ಅತಿಥಿ ಶಿಕ್ಷಕರಿಗೆ ಇನ್ನೂ ಗೌರವಧನ ಬಿಡುಗಡೆ ಮಾಡಿಲ್ಲ. ಇದರಿಂದ ಅವರು ಸಹ ಸಂಕಷ್ಟದಲ್ಲಿದ್ದು, ಗೌರವಧನಕ್ಕಾಗಿ ಕಾಯುವ ಪರಿಸ್ಥಿತಿ ಎದುರಿಸುತ್ತಿದ್ದಾರೆ ಎಂದು ಹೇಳಿದರು. ಆದ್ದರಿಂದ ತಕ್ಷಣವೇ ಪೂರ್ವ ಪ್ರಾಥ-'ಮಿಕ (ಇಸಿಸಿಇ) ಅತಿಥಿ ಶಿಕ್ಷಕರು ಮತ್ತು ಆಯಾಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಬೇಕು ಹಾಗೂ ಕಳೆದ ವರ್ಷದ ಬಾಕಿ ಗೌರವಧನವನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಲಾಯಿತು.
ಈ ಸಂದರ್ಭದಲ್ಲಿ ಎಐಡಿವೈಒ ಜಿಲ್ಲಾಧ್ಯಕ್ಷ ಚನ್ನಬಸವ ಜಾನೇಕಲ್, ದತ್ತುಸ್ವಾಮಿ ಆತ್ಕುರ್, ವೀರೇಶ್ ಎಲ್ ಕೆ ದೊಡ್ಡಿ, ಚೇತನಾ, ರೇಖಾ, ಆಂಜನೇಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಏತನೀರಾವರಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ ಬ್ಲಾಕ್ ಅಧ್ಯಕ್ಷ ಶ್ರೀನಿವಾಸರಾವ್

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಏತನೀರಾವರಿ ಯೋಜನೆಯಿಂದ ಗ್ರಾಮೀಣ ಭಾಗದ ರೈತರ ಜಮೀನುಗಳಿಗೆ ನೀರಿನ ಅನುಕೂಲವಾಗುವ ಜೊತೆಗೆ ಉತ್ತಮ ಬದುಕಿಗೆ ದಾರಿಯಾಗುತ್ತದೆ ಎಂದು ಕಂಪ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಶ್ರೀನಿವಾಸರಾವ್ ಅಭಿಪ್ರಾಯ ಪಟ್ಟರು.**




ತಾಲೂಕಿನ ಹಂಪಾದೇವನಹಳ್ಳಿ ಗ್ರಾಮದಲ್ಲಿ ಏತನೀರಾವರಿ ಯೋಜನೆ ಕಾಮಗಾರಿಗೆ ಶನಿವಾರ ಅಡಿಗಲ್ಲು ಪೂಜೆ ಸಲ್ಲಿಸಿದ ನಂತರ ಮಾತನಾಡಿ, ಹೊನ್ನಳ್ಳಿ, ಹಂಪಾದೇವನಹಳ್ಳಿ ಭಾಗದಲ್ಲಿರುವ ಎಸ್ಸಿ, ಎಸ್ಟಿ ರೈತರ ಜಮೀನುಗಳಿಗೆ ನೀರು ಒದಗಿಸುವ ಹಿತದೃಷ್ಟಿಯಿಂದ ಏತನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗಿದೆ. ಇದರಿಂದ ಈ ಭಾಗದ ರೈತ-ರಿಗೆ ಬಹಳಷ್ಟು ಅನುಕೂಲವಾಗಲಿದೆ. ಇದರ ಸದುಯೋಗದೊಂದಿಗೆ ಉತ್ತಮ ಬೆಳೆಗಳನ್ನು ಬೆಳೆಯುವ ಮೂಲಕ ಆರ್ಥಿಕವಾಗಿ ಸಬಲರಾಗಬೇಕು ಎಂದರು.
ಸಣ್ಣ ನೀರಾವರಿ ಇಲಾಖೆಯ ಎಇ ವಿಜಯಕುಮಾರ ಮಾತನಾಡಿ, ಏತನೀರಾವರಿ ಮೂಲಕ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡದ ರೈತರ ಜಮೀನುಗಳಿಗೆ ಸಮರ್ಪಕವಾಗಿ ನೀರು ಒದಗಿಸಲಾಗುತ್ತದೆ. ಹೊನ್ನಳ್ಳಿ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ರೈತರ 55 ಎಕರೆ ಜಮೀನುಗಳಿಗೆ ನೀರು ಒದಗಿಸುವ ನಿಟ್ಟಿನಲ್ಲಿ ಸುಮಾರು 55 ಲಕ್ಷ ವೆಚ್ಚದ ಏತನೀರಾವರಿ ಕಾಮಗಾರಿಗೆ ಚಾಲನೆ ಸಿಕ್ಕಿದೆ. ಮತ್ತು ಹಂಪಾದೇವನಹಳ್ಳಿ ಗ್ರಾಮದಲ್ಲಿ ಪರಿಶಿಷ್ಟ ಪಂಗಡದ ರೈತರ 20 ಎಕರೆ ಜಮೀನುಗಳಿಗೆ ಸುಮಾರು 12 ಲಕ್ಷ ವೆಚ್ಚದಲ್ಲಿ ಮತ್ತು ಪರಿಶಿಷ್ಟ ಜಾತಿಯ ರೈತರ 15 ಎಕರೆ ಜಮೀನುಗಳಿಗೆ ಸುಮಾರು 27 ಲಕ್ಷ ವೆಚ್ಚದ ಏತನೀರಾವರಿ ಯೋಜನೆಯಾಗಿದೆ. ಒಟ್ಟಾರೆಯಾಗಿ ಟಿಸಿಪಿ, ಟಿಎಸ್‌ಪಿ ಯೋಜನೆಯಡಿ ಸುಮಾರು 94 ಲಕ್ಷ ವೆಚ್ಚದ ಏತನೀರಾವರಿ ಮಾಡಲಾಗುತ್ತಿದೆ ಎಂದರು.
ನಂತರ ಹಂಪಾದೇವನಹಳ್ಳಿ ಗ್ರಾಮದಲ್ಲಿ ಏತನೀರಾವರಿ ಯೋಜನೆ ಕಾಮಗಾರಿಗೆ ಬ್ಲಾಕ್ ಅಧ್ಯಕ್ಷ ಕೆ.ಶ್ರೀನಿವಾಸರಾವ್ ಶಂಕುಸ್ಥಾಪನೆ ನೆರವೇರಿಸಿದರು.
ಈ ಸಂದರ್ಭದಲ್ಲಿ ಸೈಟ್ ಇಂಜಿನಿಯರ್ ವಿಶ್ವಜೀತ್ ಪಾಟೀಲ್, ಹೊನ್ನಳ್ಳಿ ಗ್ರಾಮದ ಮುಖಂಡರಾದ ಓಂಕಾರಗೌಡ, ದೇವರಾಜ, ಸುಬಾನ್‌ಸಾಬ್, ಸಿದ್ದರಾಮಣ್ಣ, ದೇವಣ್ಣ, ನಾಗರಾಜ, ಬಾಳಪ್ಪ, ಹಂಪಾದೇವನಹಳ್ಳಿಯ ಎ.ಹುಲುಗಪ್ಪ, ಗುರುಮೂರ್ತಿ, ಇಟಗಿ ಬಸಪ್ಪ, ಮಲ್ಲಯ್ಯ, ಗಿರಿಯಪ್ಪ, ಹರಿಜನ ಹುಲುಗಪ್ಪ, ಅಂಜಿನಿ, ವಿರೇಶ, ವೆಂಕಟೇಶ, ಕೆ.ರಾಮಾಂಜಿನಿ, ಪಂಪನಗೌಡ ಸೇರಿದಂತೆ ಅನೇಕರಿದ್ದರು.
ವರದಿ : ಜಿಲಾನಸಾಬ್ ಬಡಿಗೇರ್

# ಸರ್ವೋದಯ ಸಿಬಿಎಸ್‌ಇ ಶಾಲೆಯಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಸರ್ವೋದಯ ಸಿಬಿಎಸ್‌ಇ ಶಾಲೆಯಲ್ಲಿ ಶನಿವಾರ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಶಾಲೆಯ ಪ್ರಾಂಶುಪಾಲರು, ಶಿಕ್ಷಕ ವೃಂದ, ಸಿಬ್ಬಂದಿ ಹಾಗೂ ನೂರಾರು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ವಿವಿಧ ಯೋಗಾಸನಗಳನ್ನು ಪ್ರದರ್ಶಿಸುವ ಮೂಲಕ ಯೋಗದ ಮಹತ್ವವನ್ನು ಸಾರಿದರು.**



ಶಾಲಾ ಆವರಣದಲ್ಲಿ ಆಯೋಜಿಸಲಾಗಿದ್ದ ಯೋಗ ದಿನಾಚರಣೆಯಲ್ಲಿ ವಿದ್ಯಾರ್ಥಿಗಳು ತಾಡಾಸನ, ವೃಕ್ಷಾಸನ, ಭುಜಂಗಾಸನ, ವಜ್ರಾಸನ ಸೇರಿದಂತೆ ವಿವಿಧ ಯೋಗಾಸನಗಳನ್ನು ಅಭ್ಯಾಸ ಮಾಡಿದರು. ಬೆಳಗಿನ ವೇಳೆಯಲ್ಲೇ ವಿದ್ಯಾರ್ಥಿಗಳು ಯೋಗ ಮ್ಯಾಟ್‌ಗಳೊಂದಿಗೆ ಸಾಲುಗಟ್ಟಿ ಕುಳಿತು ಸಾಮೂಹಿಕ ಯೋಗಾಭ್ಯಾಸ ನಡೆಸಿದ ದೃಶ್ಯ ಗಮನ ಸೆಳೆಯಿತು. ಕಾರ್ಯಕ್ರಮದ ಆರಂಭದಲ್ಲಿ ಯೋಗ ದಿನದ ಮಹತ್ವದ ಕುರಿತು ಮಾತನಾಡಿದ ಶಿಕ್ಷಕರು, ಯೋಗವು ಕೇವಲ ವ್ಯಾಯಾಮವಲ್ಲ; ಅದು ದೇಹ, ಮನಸ್ಸು ಹಾಗೂ ಆತ್ಮದ ಸಮತೋಲನವನ್ನು ಕಾಪಾಡುವ ಜೀವನ ಪದ್ಧತಿ ಎಂದು ತಿಳಿಸಿದರು.

ಇಂದಿನ ಒತ್ತಡದ ಬದುಕಿನಲ್ಲಿ ಯೋಗವು ಆರೋಗ್ಯಕರ ಹಾಗೂ ನೆಮ್ಮದಿಯ ಜೀವನಕ್ಕೆ ದಾರಿದೀಪವಾಗಿದೆ ಎಂದು ಅಭಿಪ್ರಾಯಪಟ್ಟರು. ವಿದ್ಯಾರ್ಥಿಗಳಿಗೆ ಯೋಗದ ವಿವಿಧ ಆಸನಗಳು ಹಾಗೂ ಅವುಗಳ ಆರೋಗ್ಯಕರ ಪ್ರಯೋಜನಗಳ ಬಗ್ಗೆ ಮಾಹಿತಿ ನೀಡಲಾಯಿತು. ನಿಯಮಿತ ಯೋಗಾಭ್ಯಾಸದಿಂದ ದೈಹಿಕ ಸಾಮರ್ಥ್ಯ ವೃದ್ಧಿಯಾಗುವುದರ ಜೊತೆಗೆ ಏಕಾಗ್ರತೆ, ಆತ್ಮವಿಶ್ವಾಸ ಹಾಗೂ ಮಾನಸಿಕ ನೆಮ್ಮದಿ ಹೆಚ್ಚುತ್ತದೆ ಎಂದು ವಿವರಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಆವರಣದಲ್ಲಿ ಪರಿಸರ ಸಂರಕ್ಷಣೆಯ ಸಂದೇಶ ಸಾರುವ ನಿಟ್ಟಿನಲ್ಲಿ ಗಿಡ ನೆಡುವ ಕಾರ್ಯಕ್ರಮವೂ ನಡೆಯಿತು.

ಯೋಗ ಮತ್ತು ಪರಿಸರ ಎರಡೂ ಆರೋಗ್ಯಕರ ಬದುಕಿನ ಅವಿಭಾಜ್ಯ ಅಂಗಗಳಾಗಿದ್ದು, ಪ್ರತಿಯೊಬ್ಬರೂ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಗಣ್ಯರು ಕರೆ ನೀಡಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಯೋಗದ ಕುರಿತು ಭಾಷಣ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಜಾಗೃತಿ ಸಂದೇಶಗಳನ್ನು ನೀಡುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಯೋಗ ದಿನಾಚರಣೆಯ ಅಂಗವಾಗಿ ಶಾಲೆಯಲ್ಲಿ ವಿಶೇಷ ವೇದಿಕೆ ಅಲಂಕರಿಸಲಾಗಿದ್ದು, ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಉತ್ಸಾಹದಿಂದ ಪಾಲ್ಗೊಂಡಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101